ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–19 ಸಂಚಿಕೆ–7 ಪುಟಗಳು–10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪದಲ್ಲಿ ವಿಶ್ವಯೋಗ ದಿನಾಚರಣೆ





ತಾ.19–06–2019ರಂದು ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ "ವಿಶ್ವಯೋಗದಿನ"ದ ಪ್ರಯುಕ್ತ ವಿಶೇಷ ಕಾರ್ಯಕ್ರಮ ಜರಗಿತು. ನಮ್ಮ ಸಂಘದ ಹಲವಾರು ಸದಸ್ಯರು ಯೋಗಪಟು ಗಳಾಗಿದ್ದು ನಿತ್ಯವೂ ಯೋಗಾಭ್ಯಾಸ ಮಾಡುವುದನ್ನು ತಮ್ಮ ದಿನಚರಿಯಲ್ಲಿ ಅಳವಡಿಸಿಕೊಂಡು ಅದರ ಪ್ರಯೋಜನ ವನ್ನು ಪಡೆಯುತ್ತಿದ್ದಾರೆ. ನಮ್ಮ ಸಂಘವೂ ನಮ್ಮ ಸಮಾಜಬಾಂಧವರಲ್ಲಿ ಯೋಗಾಭ್ಯಾಸವನ್ನು ಜನಪ್ರಿಯಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಈ ಹಿಂದೆಯೂ ನಡೆಸಿರುತ್ತದೆ. ಈ ಬಾರಿ ವಿಶ್ವಯೋಗದಿನದಂದು ಪರ್ಕಳದ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಕೇಂದ್ರದ ಯೋಗ ತಜ್ಞರಾದ ಡಾ। ಶೋಭಿತ್ ಹಾಗೂ ಡಾ। ವರ್ಷಾರವರನ್ನು ಅತಿಥಿಗಳಾಗಿ ಬರಮಾಡಿಸಿಕೊಂಡು ಅವರಿಂದ ಯೋಗದ ಬಗ್ಗೆ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸ ಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಸಂಘದ ಸಲಹೆಗಾರರಾದ ಶ್ರೀ ಸಿ ಎಸ್ ರಾಯರು ಸ್ವಾಗತಿಸಿ ಪ್ರಸ್ತಾವನೆಗೈದರು. ದೀಪ ಪ್ರಜ್ವಲನದೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಡಾ। ಶೋಭಿತ್ ರವರು ಉಪನ್ಯಾಸ ಮಾಡಿದರು. ನಂತರ ಡಾ। ಶೋಭಿತ್ ಹಾಗೂ ಡಾ। ವರ್ಷಾ ರವರು ಕಾರ್ಯಕರ್ತರೊಂದಿಗೆ ಯೋಗಾಭ್ಯಾಸವನ್ನು ನಡೆಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ರವರು ಸಂಪನ್ಮೂಲ ವ್ಯಕ್ತಿಗಳಿಗೆ ಶಾಲುಹೊದಿಸಿ ಸ್ಮರಣಿಕೆ ಇತ್ತು ಗೌರವಿಸಿದರು. ಕಾರ್ಯದರ್ಶಿಗಳಾದ ಶ್ರೀ ಯು. ಅರವಿಂದ ಕುಮಾರ್ ಧನ್ಯವಾದ ವಿತ್ತರು.

ॐ ॐ ॐ ॐ ॐ ॐ ॐ ॐ ॐ ॐ ॐ || HARI OM || ॐ ॐ ॐ ॐ ॐ ॐ ॐ ॐ ॐ ॐ ॐ

**Sri Sthanika Brahmana Sangha**
Kunjibettu Udupi
and
**Chinmaya Mission Mangaluru**
jointly organizing a series of Talk on



**Bhagawad Gita**
Karma Yoga – Chapter 3 in English
By **Swami Aparajitananda**
Acharya Chinmaya Mission Mangaluru

**Date: 13th - 19th August 2019**
**Time: 6:00 pm to 7:30 pm**

Venue: Padmanabhayya Hall,
Sri Sharada Mantapa, Kunjibettu, Udupi 576102

ॐ ॐ ॐ ॐ ॐ ॐ ॐ ॐ ॐ **ALL ARE INVITED** ॐ ॐ ॐ ॐ ॐ ॐ ॐ ॐ ॐ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

**ಪ್ರಕಟಣೆ**

ಆತ್ಮೀಯ ಸಮಾಜ ಬಾಂಧವರೇ,

ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ತುಳುನಾಡ 'ಆಟ–ಊಟ'

ಮಳೆಗಾಲದಲ್ಲಿ ತುಳುನಾಡ 'ಆಟಊಟ' ತಾ.28–07–2019ನೇ ರವಿವಾರ ಸಂಜೆ 5–00ರಿಂದ 8–00ರ ತನಕ ಮಳೆಗಾಲದ ಜನಪದ ಆಟಗಳು ಮತ್ತು ವಿಶೇಷ ಭೋಜನ ನಡೆಯಲಿದೆ.

### ನಾಗರಪಂಚಮಿ

ತಾ.05–08–2019ನೇ ಸೋಮವಾರ
ಸಮಯ : ಬೆಳಿಗ್ಗೆ 9–00ರಿಂದ
ಮಧ್ಯಾಹ್ನ 12–00ರ ತನಕ

### ಶ್ರೀ ವರಮಹಾಲಕ್ಷ್ಮೀ ವ್ರತ

ತಾ.09–08–2019ನೇ ಶುಕ್ರವಾರ
ಸಂಜೆ 5–00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

### ಋಗುಪಾಕರ್ಮ

ತಾ.14–08–2019ನೇ ಬುಧವಾರ
ಸಮಯ : ಬೆಳಿಗ್ಗೆ 10–00ರಿಂದ
ಅಪರಾಹ್ನ 12–15ರ ತನಕ

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.06–09–2019ನೇ ಶುಕ್ರವಾರ
ಸಮಯ : ಸಂಜೆ 5–00 ಗಂಟೆಗೆ

### ಶೃಂಗೇರಿಯಲ್ಲಿ ಗುರುಗಳ ಭೇಟಿ

ತಾ.25–08–2019ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7–00 ಗಂಟೆಗೆ ಶ್ರೀ ಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಮೆನೇಜರ್ (9964069306, 0820–2520754) ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ಅಂದಾಜು ಖರ್ಚು ರೂ.350/-

| ಶ್ರೀ ಯು.ಅರವಿಂದ ಕುಮಾರ್ | ಶ್ರೀ ಬಿ.ಜಯರಾಮ ರಾವ್ | ಶ್ರೀ ಕೆ. ಮಂಜುನಾಥ ಹೆಬ್ಬಾರ್ |
| --- | --- | --- |
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

2020ನೇ ಇಸವಿಯ ಜನವರಿ ತಿಂಗಳ 11 ಮತ್ತು 12 ರಂದು ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸುವುದರೊಂದಿಗೆ ಮತ್ತೆ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲವು ಸುದ್ದಿಯ ಮುಂಚೂಣಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕಿರುಪರಿಚಯ ಇಲ್ಲಿದೆ

ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲವು ಸ್ಥಾನಿಕ ಬ್ರಾಹ್ಮಣರ ಸಂಘಗಳು ಮತ್ತು ಸಂಸ್ಥೆಗಳು ಹಾಗೂ ಸ್ಥಾನಿಕ ಬ್ರಾಹ್ಮಣ ಸಮಾಜದ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡಿಸಿಕೊಂಡ ಒಕ್ಕೂಟವಾಗಿದೆ. ಇದು 2012ನೇ ಇಸವಿಯಂದು ಸ್ಥಾಪಿಸಲ್ಪಟ್ಟಿತು. ಇದರ ಕಛೇರಿಯು ಮಂಗಳೂರಿನ ಕರಂಗಲ್ಪಾಡಿಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿದೆ. ಪ್ರಸ್ತುತ ಶ್ರೀ ಎನ್. ಕೆ ಜಗನ್ನಿವಾಸರಾಯರು ಇದರ ಅಧ್ಯಕ್ಷರಾಗಿಯೂ ಶ್ರೀ ದೇವಾನಂದ ಭಟ್ ಇವರು ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಮಹಾಮಂಡಲದ ಸ್ಥಾಪನೆಯ ಉದ್ದೇಶಗಳು**

1) ನಮ್ಮ ಸಮಾಜದಲ್ಲಿ ಹಲವಾರು ಸಂಘಗಳು ಅಸ್ತಿತ್ವದಲ್ಲಿವೆ. ಒಂದೆರಡು ದಶಕಗಳ ಹಿಂದೆ ಕರಾವಳಿ ಪ್ರದೇಶದಲ್ಲಿ ಉಡುಪಿ ಹಾಗೂ ಮಂಗಳೂರಿನಲ್ಲಿ ಮಾತ್ರ ನಮ್ಮವರ ಸಂಘಗಳು ಇದ್ದವು. ಈ ಪೇಟೆಗಳಿಂದ ದೂರದಲ್ಲಿ ವಾಸವಾಗಿದ್ದ ಸಮಾಜಬಾಂಧವರಿಗೆ ಈ ಸಂಘಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಕಷ್ಟವಾಗುತ್ತಿದ್ದುದರಿಂದ ಒಂದೊಂದಾಗಿ ಕುಂದಾಪುರದಿಂದ ಹಿಡಿದು ಮಂಗಳೂರಿನ ತನಕ ಉಡುಪಿ, ಪಡುಬಿದ್ರೆ, ಮೂಡಬಿದ್ರೆ, ಬೆಳ್ತಂಗಡಿ, ಕಾರ್ಕಳ, ಮುಲ್ಕಿ ಪಾವಂಜೆ, ವಿಟ್ಲ, ಕಡಬ, ಸುರತ್ಕಲ್, ಪುತ್ತೂರು, ಸುಳ್ಯ ಹೀಗೆ ಊರಿಗೊಂದರಂತೆ ಸಂಘಗಳು ಜನ್ಮ ತಾಳಿದವು. ವೈಯುಕ್ತಿಕ ಕಾರಣವನ್ನಿತ್ತು ಸಂಘದ ಚಟುವಟಿಕೆಗಳಿಂದ ವಿಮುಖನಾಗದೆ, ತಮ್ಮೂರಲ್ಲೇ ಸಂಘವನ್ನು ಕಟ್ಟಿ ಸಮಾಜದ ಸೇವೆಗೈಯುವ ನಮ್ಮವರ ಈ ಮನೋಭಾವವನ್ನು ಶ್ಲಾಘಿಸದೇ ಇರಲಾಗದು. ಹೀಗೆ ಅಲ್ಲಲ್ಲಿ ಸಂಘಗಳು ಹುಟ್ಟಿಕೊಂಡುದರಿಂದಲೇ ಈಗ ಮನೆಮನೆಯಲ್ಲಿಯೂ ಸ್ಥಾನಿಕ ಬ್ರಾಹ್ಮಣ ಅನ್ನುವ ಪ್ರಜ್ಞೆ ಜಾಗೃತವಾಗಿದೆ. ಆದರೆ ಈ ವ್ಯವಸ್ಥೆಯಲ್ಲಿಯೂ ಒಂದು ಕೊರತೆ ಇದೆ. ಊರೂರಲ್ಲಿ ಸಂಘಗಳು ಹುಟ್ಟಿಕೊಂಡುದುದರ ನಿಮಿತ್ತ ನಮ್ಮವರ ಚಟುವಟಿಕೆಗಳು ಆಯಾ ಊರುಗಳಿಗೆ ಮಾತ್ರ ಸೀಮಿತವಾಗಿಬಿಟ್ಟಿವೆ. ಒಂದು ಸಂಘದವರಿಗೆ ಇನ್ನೊಂದು ಸಂಘದ ಚಟುವಟಿಕೆಗಳಾಗಲೀ, ಅದರ ಅಧ್ಯಕ್ಷ, ಕಾರ್ಯದರ್ಶಿಗಳು ಯಾರು ಎಂಬುದಾಗಲೀ, ಇನ್ನು ಕೆಲವೊಮ್ಮೆ ಸಂಘದ ವಿಳಾಸವೂ ತಿಳಿದಿರದ ಪರಿಸ್ಥಿತಿ ಇದೆ. ವಿಶ್ವದಾದ್ಯಂತ ನಮ್ಮವರು ಹರಡಿಕೊಂಡಿರುವುದರಿಂದ ನಮ್ಮವರ ಸಂಘಗಳು ಎಲ್ಲೆಲ್ಲಿವೆ, ಎಷ್ಟಿವೆ ಎಂಬ ಸಮಗ್ರ ಮಾಹಿತಿಯನ್ನಿಟ್ಟುಕೊಂಡು ಈ ಎಲ್ಲಾ ಸಂಘಗಳ ಮಧ್ಯೆ ಸಂಪರ್ಕ ಸೇತುವಾಗಿ ಕೆಲಸ ಮಾಡುವ ಜವಾಬ್ದಾರಿ ಹೊರುವ ಸಂಸ್ಥೆಯೊಂದೇ ಈ ಕೊರತೆ ಯನ್ನು ನೀಗಿಸಲು ಸಾಧ್ಯ. ಅಂತಹಾ ಸಂಸ್ಥೆಯೇ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ.

2)ಸ್ಥಾನಿಕ ಬ್ರಾಹ್ಮಣ ಸಮಾಜ ಸಣ್ಣ ಸಮಾಜ. ಹಾಗಾಗಿ ಪ್ರತಿಯೊಂದು ಸಂಘದಲ್ಲಿಯೂ ಅದರ ಚಟುವಟಿಕೆಗಳಲ್ಲಿ ಭಾಗವಹಿಸುವವರ ಹಾಗೂ ಸ್ವಯಂ ಸೇವಕರಾಗಿ ದುಡಿಯುವ ಕಾರ್ಯಕರ್ತರ ಕೊರತೆಯು ಸಾರ್ವತ್ರಿಕವಾಗಿ ಕಾಡುತ್ತಿದೆ. ಅದೇ ರೀತಿ ಪ್ರತೀ ಊರಿನಲ್ಲಿಯೂ ನಮ್ಮ ಸಮಾಜಕ್ಕೆ ಸೇರಿದ ಒಂದಲ್ಲ ಒಂದು ಪುರಾತನ ದೇವಸ್ಥಾನವಿದೆ. ಈ ದೇವಸ್ಥಾನಗಳ ಉತ್ಸವ, ಪೂಜೆ ಪುನಸ್ಕಾರ, ಜೀರ್ಣೋದ್ಧಾರಗಳ ಜವಾಬ್ದಾರಿಯನ್ನು ಕೇವಲ ಆ ದೇವಸ್ಥಾನಗಳನ್ನು ನೋಡಿಕೊಳ್ಳುವ ಕುಟುಂಬದವರಿಗೆ ಅಥವಾ ಆಯಾ ಊರಿನವರಿಗೆ ಬಿಟ್ಟುಕೊಟ್ಟು ಉಳಿದವರು ತಮಗೆ ಸಂಬಂಧಿಸದವರಂತೆ ಇರುವುದು ಸರಿಯಲ್ಲ. ಪ್ರತಿಯೊಂದು ಸಂಘದ ಕಾರ್ಯಕ್ರಮಕ್ಕೆ ಆಯಾ ಊರವರೊಂದಿಗೆ ಹತ್ತಿರದ ಸಂಘಗಳ ಹತ್ತಾರು ಪ್ರತಿನಿಧಿಗಳಾದರೂ ಭಾಗವಹಿಸುವಂತಾಗಬೇಕು. ನಮ್ಮ ದೇವಸ್ಥಾನಗಳ ಬ್ರಹ್ಮಕಲಶೋತ್ಸವ ಉತ್ಸವಗಳಿಗೆ ಎಲ್ಲೆಡೆಗಳಿಂದ ನಮ್ಮ ದೇವಸ್ಥಾನ ಎಂಬ ಅಭಿಮಾನದಿಂದ ನಮ್ಮ ಸಮಾಜದ ನೂರಾರು ಕಾರ್ಯಕರ್ತರು, ಸಾವಿರಾರು ಭಕ್ತರು ಬರುವಂತಾಗಬೇಕು. ಈ ರೀತಿ ವಿಜೃಂಭಣೆಯಿಂದ ನಮ್ಮ ದೇವಸ್ಥಾನಗಳಲ್ಲಿ ಉತ್ಸವಗಳು ನೆರವೇರಿದರೆ ಸ್ಥಾನಿಕ ಸಮಾಜದ ಘನತೆ ಹೆಚ್ಚುತ್ತದೆ. ಹೀಗಾಗಬೇಕಾದರೆ ನಮ್ಮ ಸಮಾಜದ ಪ್ರತಿಯೊಂದು ಸಂಘ ಸಂಸ್ಥೆಗಳ ಮತ್ತು ದೇವಸ್ಥಾನಗಳ ಪ್ರಮುಖ ಕಾರ್ಯಕ್ರಮಗಳಿಗೆ ಸಾಕಷ್ಟು ಮುಂಚಿತವಾಗಿ ತಕ್ಕ ಪ್ರಚಾರ ನೀಡಿ ಅದನ್ನು ಸಮಗ್ರ ಸ್ಥಾನಿಕ ಸಮಾಜಕ್ಕೆ ತಲುಪಿಸುವ ಜವಾಬ್ದಾರಿಯನ್ನು ಹೊರುವ ಸಂಸ್ಥೆ ಬೇಕು. ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಅಂತಹಾ ಜವಾಬ್ದಾರಿಯನ್ನು ನಿರ್ವಹಿಸುವ ಸಂಸ್ಥೆ.

3)ಸ್ಥಾನಿಕ ಸಮಾಜವು ಶ್ರೀ ಶೃಂಗೇರಿ ಪೀಠದ ಶಿಷ್ಯ ವರ್ಗಕ್ಕೆ ಸೇರಿದ ಸಮಾಜ. ಉದ್ಯೋಗ ಹಾಗೂ ವಿದ್ಯಾಭ್ಯಾಸದ ನಿಮಿತ್ತ ವಿಶ್ವದಾದ್ಯಂತ ಹರಡಿಹೋಗಿರುವ ಸ್ಥಾನಿಕರಿಗೆ ನಾನಾ ಕಾರಣಗಳಿಂದ ಶ್ರೀ ಶೃಂಗೇರಿ ಪೀಠದೊಂದಿಗೆ ಹೊಕ್ಕುಬಳಕೆ ಕಡಿಮೆ ಇದೆ. ಸ್ಥಾನಿಕರ ಮನೆಗಳು ಕರಾವಳಿಯಲ್ಲಿರುವುದು ಹಾಗೂ ಶ್ರೀ ಶೃಂಗೇರಿ ಮಠವು ಘಟ್ಟದ ಮೇಲಿರುವುದು ಈ ಕಾರಣಗಳಲ್ಲೊಂದು. ಈ ಕೊರತೆಯನ್ನು ನೀಗಿಸಲೋಸುಗ ಪ್ರತಿ ವರ್ಷವೂ ಜಗದ್ಗುರುಗಳ ಚಾತುರ್ಮಾಸ್ಯದ ಸಂದರ್ಭದಲ್ಲಿ ಚೌತಿಯ ಹಿಂದಿನ ಆದಿತ್ಯವಾರ ಗುರುಗಳನ್ನು ಭೇಟಿಯಾಗುವ ಸಂಪ್ರದಾಯವನ್ನು ನಾವು ಪಾಲಿಸುತ್ತಿದ್ದೇವೆ. ಈ ಕಾರ್ಯಕ್ರಮಕ್ಕೆ ಸಾಕಷ್ಟು ಮುಂಚಿತವಾಗಿ ಪ್ರಚಾರವಿತ್ತು ಆ ದಿನದಂದು ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರನ್ನು ಶೃಂಗೇರಿಗೆ ಕರೆದೊಯ್ಯುವ ಕೆಲಸ ಆಗಬೇಕು. ಅಷ್ಟು ಮಾತ್ರವಲ್ಲದೆ ಜಗದ್ಗುರುಗಳು ಈ ದೇಶದ ಉದ್ದಗಲಕ್ಕೂ ಆವಾಗಾವಾಗ ವಿಜಯಯಾತ್ರೆಗೈಯುತ್ತಾ ಶಿಷ್ಯರನ್ನು ಅನುಗ್ರಹಿಸುವ ಪರಿಪಾಟವನ್ನು ಇಟ್ಟುಕೊಂಡಿದ್ದಾರೆ. ಈ ಸಮಯದಲ್ಲಿ ಗುರುಗಳು ಆಗಮಿಸುವ ಮಾಹಿತಿಯನ್ನು ಆಯಾ ಪ್ರದೇಶದ ಸಮಾಜಬಾಂಧವರಿಗೆ ತಲುಪಿಸಿ ಆ ಪ್ರದೇಶದ ಸಂಘದ ನೇತೃತ್ವದಲ್ಲಿ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯುವ ಅಭ್ಯಾಸವನ್ನು ಬೆಳೆಸುವ ಕೆಲಸ ಆಗಬೇಕು. ಹಾಗೆಯೇ ಶೃಂಗೇರಿ ಪೀಠದೊಂದಿಗೆ ಅವಿರತವಾಗಿ ಸಂಪರ್ಕದಲ್ಲಿದ್ದು ಮಠದ ಆಗುಹೋಗುಗಳನ್ನು, ಶೃಂಗೇರಿ ಶ್ರೀ ಶಾರದಾ ದೇವಸ್ಥಾನದ ಉತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಸಮಾಜಬಾಂಧವರಿಗೆ ತಿಳಿಸಿ ಈ ಕಾರ್ಯಕ್ರಮಗಳಲ್ಲಿ ನಮ್ಮವರು ಭಾಗಿಯಾಗುವಂತೆ ಮಾಡುವ ಕೆಲಸ ಆಗಬೇಕು. ಹೀಗೆ ಶ್ರೀ ಶೃಂಗೇರಿ ಮಠದೊಂದಿಗೆ ಸ್ಥಾನಿಕ ಸಮಾಜದ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲು ಒಂದು ಸಂಸ್ಥೆ ಮುತುವರ್ಜಿ ವಹಿಸಿ ಕೆಲಸಮಾಡಬೇಕು. ಈ ಮುತುವರ್ಜಿ ಇರುವ ಸಂಸ್ಥೆಯೇ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ.

4)ಸ್ಥಾನಿಕರ ಅಸ್ಮಿತೆಯನ್ನು ಪ್ರಶ್ನಿಸುವಂತಹ ಸಂದರ್ಭಗಳು ಎದುರಾದಾಗ ಅದಕ್ಕೆ ಸರಿಯಾದ ಉತ್ತರವನ್ನು ನೀಡಲು ಒಂದು ಸಂಸ್ಥೆ ಬೇಕು. ಯಾವುದಾದರೊಂದು ಕಾರಣಕ್ಕೆ ಯಾವುದೇ ಒಂದು ಸಂಘದ ಚಟುವಟಿಕೆಗಳು ಕಡಿಮೆಯಾದಲ್ಲಿ ಅದನ್ನು ಗಮನಿಸಿ ಅದನ್ನು ಹುರಿದುಂಬಿಸಲಿಕ್ಕೆ ಒಂದು ಸಂಸ್ಥೆ ಬೇಕು. ಯಾವುದೇ ಒಂದು ನಮ್ಮ ದೇವಸ್ಥಾನ ಕಷ್ಟಕ್ಕೆ ಒಳಗಾದರೆ ಅಥವಾ ಜೀರ್ಣಾವಸ್ಥೆಗೆ ತಲುಪಿದರೆ ಅದರ ಕೈಹಿಡಿದು ಮೇಲೆತ್ತಲು ನಾಯಕನಾಗಿ ಒಂದು ಸಂಸ್ಥೆ ಬೇಕು ಅಂತಹಾ ಸಂಸ್ಥೆ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ.

5)ಸ್ಥಾನಿಕ ಸಮಾಜದ ಉದ್ಧಾರಕ್ಕಾಗಿ ವಿದ್ಯಾರ್ಥಿ ವೇತನ, ವೈದ್ಯಕೀಯ ನೆರವು, ತುರ್ತು ನೆರವು ಇತ್ಯಾದಿಗಳನ್ನು ಪ್ರತಿಯೊಂದು ಸಂಘಗಳೂ ಶ್ಲಾಘನೀಯವಾಗಿ ಒದಗಿಸುತ್ತಿವೆ. ಆದರೆ ಇದಕ್ಕೂ ಮಿಗಿಲಾಗಿ ಕಾಲೇಜು, ಸೇವಾಸಂಸ್ಥೆ ಇತ್ಯಾದಿ ಅಧಿಕ ಬಂಡವಾಳದ ಅಗತ್ಯವಿರುವ ಸಂಸ್ಥೆಗಳು ಸ್ಥಾಪನೆಯಾದಲ್ಲಿ ಅವು ನಮ್ಮ ಸಮಾಜಕ್ಕೆ ದೊಡ್ಡ ಗೌರವವನ್ನು ತಂದುಕೊಡುತ್ತವೆ. ಇಂತಹಾ ಸಂಸ್ಥೆಗಳನ್ನು ಸ್ಥಾಪಿಸಬೇಕಾದರೆ ಹತ್ತೂರಿನ ಮುತ್ಸದ್ದಿಗಳು ಕೈಜೋಡಿಸಿದರೆ ಮಾತ್ರ ಸಾಧ್ಯ. ಹೀಗೆ ಹತ್ತೂರಿನ ಹಿರಿಯರನ್ನು ಒಟ್ಟುಗೂಡಿಸಿ ಬೃಹತ್ ಯೋಜನೆಯನ್ನು ಸಾಧಿಸುವ ದೂರದೃಷ್ಟಿಯನ್ನು ಹೊಂದಿರುವ ಸಂಸ್ಥೆಯೇ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ

**ಮಹಾಮಂಡಲದ ರಚನೆ ಹೇಗೆ?**

1)2012ರಲ್ಲಿ ಉಡುಪಿಯಲ್ಲಿನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಮಹಾಮಂಡಲದ ಕಲ್ಪನೆ ಹುಟ್ಟಿತು. ಹಾಗೂ ವರ್ಷವೊಂದು ಕಳೆಯುವುದಲ್ಲೇ ಅದರ ಸ್ಥಾಪನೆಯೂ ಆಗಿ ಅಧಿಕೃತವಾಗಿ ನೊಂದಾವಣೆಯೂ ಆಯಿತು. ಸ್ಥಾನಿಕ ಬ್ರಾಹ್ಮಣರ ಸಂಘಗಳು ಹಾಗೂ ಸಂಸ್ಥೆಗಳು(ಉದಾ: ದೇವಸ್ಥಾನಗಳು) ಇದರ ಸದಸ್ಯರಾಗಲು ಅರ್ಹರು. ಪ್ರತಿಯೊಂದು ಸದಸ್ಯ ಸಂಸ್ಥೆಯಿಂದ ಐದು ಜನ ಪ್ರತಿನಿಧಿಗಳು ಮಹಾಮಂಡಲದಲ್ಲಿ ಕಾರ್ಯನಿರ್ವಹಿಸುವರು. ಪ್ರಸ್ತುತ 14 ಸಂಘಗಳು ಇದರ ಸದಸ್ಯರಾಗಿವೆ.

2)ಸ್ಥಾನಿಕ ಬ್ರಾಹ್ಮಣರಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಕೊರತೆಯಿಲ್ಲ. ನಮ್ಮ ಸಮಾಜದಲ್ಲಿ ಯಾವುದೇ ಒಂದು ಸಂಘಕ್ಕಿಂತಲೂ ಹೆಚ್ಚಿನ ಸಮಾಜಮುಖೀ ಕಾರ್ಯಕ್ರಮಗಳನ್ನು ಮಾಡುತ್ತಿರುವ ವ್ಯಕ್ತಿಗಳಿದ್ದಾರೆ. ಹಲವಾರು ಮಂದಿ ದೊಡ್ಡ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ನಾವು ಅವರ ಪ್ರಭಾವವನ್ನು ಸಮಾಜದ ಬೆಳವಣಿಗೆಗೆ ಉಪಯೋಗಿಸಿಕೊಳ್ಳುವ ಅವಕಾಶಗಳಿವೆ. ಹಲವಾರು ವ್ಯಕ್ತಿಗಳು ಹಲವಾರು ರಂಗಗಳಲ್ಲಿ ಮುಂಚೂಣಿಯಲ್ಲಿದ್ದು ಅವರ ಪರಿಣಿತಿಯನ್ನು ಸ್ಥಾನಿಕ ಸಮಾಜದ ಬೆಳವಣಿಗೆಗೆ ಬಳಸಿಕೊಳ್ಳಬಹುದು. ಇಂತಹಾ ಸಂಪನ್ಮೂಲ ವ್ಯಕ್ತಿಗಳಲ್ಲಿ ಬಹಳಷ್ಟು ಮಂದಿ ದೂರದ ಊರಿನಲ್ಲಿ ಅಥವಾ ವಿದೇಶದಲ್ಲಿ ವಾಸಿಸುತ್ತಿದ್ದು ಯಾವುದೇ ಸಂಘದ ವ್ಯಾಪ್ತಿಗೂ ಒಳಪಡದೇ ಸಮಾಜದ ಚಟುವಟಿಕೆಗಳಿಂದ ದೂರವಿದ್ದಾರೆನ್ನುವುದನ್ನು ಗಮನಿಸಬೇಕು. ಇಂತಹಾ ಸಂಪನ್ಮೂಲ ವ್ಯಕ್ತಿಗಳಿಂದ ನಮ್ಮ ಸಮಾಜಕ್ಕೆ ಉಪಯೋಗವಾಗುವಂತಹಾ ಕೆಲಸವನ್ನು ಪಡೆಯಲೋಸುಗ ಅವರಿಗೆ ಮಹಾಮಂಡಲದ ಸದಸ್ಯರಾಗಲು ಅವಕಾಶವನ್ನು ಕಲ್ಪಿಸಲಾಗಿದೆ.

**ಮಹಾಮಂಡಲವು ತನ್ನ ಉದ್ದೇಶಗಳಲ್ಲಿ ಏನನ್ನೆಲ್ಲಾ ಸಾಧಿಸಿದೆ**

1)ಸ್ಥಾನಿಕ ಬ್ರಾಹ್ಮಣರ ಎಲ್ಲಾ ಸಂಘಗಳ ಮಾಹಿತಿಯನ್ನು ಸಂಗ್ರಹಿಸಿ, ಅದರ ಪದಾಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದೆ. ಕಾಲಕಾಲಕ್ಕೆ ಈ ಎಲ್ಲಾ ಸಂಘಗಳ ಪ್ರತಿನಿಧಿಗಳ ಸಭೆ ಕರೆದು ಚರ್ಚೆ ನಡೆಸುತ್ತಿದೆ

2)ನಮ್ಮ ಸಮಾಜದ ಎಲ್ಲಾ ದೇವಸ್ಥಾನಗಳ ವಿವರವನ್ನು ಸಂಗ್ರಹಿಸಿದೆ ಹಾಗೂ ಈ ದೇವಸ್ಥಾನಗಳ ಆಡಳಿತಗಾರರೊಂದಿಗೆ ಸಂಪರ್ಕದಲ್ಲಿದೆ.

3)ಸ್ಥಾನಿಕ ಬ್ರಾಹ್ಮಣರ ಸಮಾವೇಶವನ್ನು ನಡೆಸಿ ಈ ಸಮಾವೇಶದಲ್ಲಿ ನಮ್ಮ ಸಮಾಜದ ಸಾಧಕರಿಗೆ ಸನ್ಮಾನ, ಕಲಾಪ್ರತಿಭೆಗಳಿಂದ ಕಲಾಪ್ರದರ್ಶನ, ಚಿಂತಕರಿಂದ ವಿಚಾರಗೋಷ್ಠಿ, ಹಿರಿಯರಿಂದ ಮಾರ್ಗದರ್ಶನ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದೆ.

4)ನಮ್ಮ ಸಮಾಜಬಾಂಧವರಿಗೆ ಕಿರುಕುಳವಿತ್ತ ಸಂದಭಗಳಲ್ಲಿ ಮಧ್ಯಪ್ರವೇಶಿಸಿ ನಮ್ಮವರಿಗೆ ನ್ಯಾಯ ಸಿಗುವಂತೆ ನೋಡಿಕೊಂಡಿದೆ.

ಹೀಗೆ ಮಹತ್ತರವಾದ ಉದ್ದೇಶ ಹಾಗೂ ಜವಾಬ್ದಾರಿಗಳನ್ನು ಇರಿಸಿಕೊಂಡು, ಸ್ಥಾನಿಕ ಬ್ರಾಹ್ಮಣರ ಸಂಘಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾ, ಸಂಪನ್ಮೂಲ ವ್ಯಕಿಗಳ ಭಂಡಾರವನ್ನು ತನ್ನಲ್ಲಿಟ್ಟುಕೊಂಡು, ಸ್ಥಾನಿಕ ಸಮಾಜಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಲು ಕಟಿಬದ್ಧವಾಗಿರುವ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲಕ್ಕೆ ಸಮಾಜಬಾಂಧವರೆಲ್ಲರೂ ಸಹಕಾರ, ಬೆಂಬಲ ಹಾಗೂ ಆಶೀರ್ವಾದವನ್ನು ಧಾರಾಳವಾಗಿ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ




*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

## ಜಾಗತಿಕ ಮಟ್ಟದ ಸಮಾವೇಶಕ್ಕೆ ಸಿದ್ಧತೆ



ಜಾಗತಿಕ ಮಟ್ಟದ ಸ್ಥಾನಿಕ ಬ್ರಾಹ್ಮಣರ ಸಮಾವೇಶಕ್ಕೆ ಬೆಂಗಳೂರಿನಲ್ಲಿ 2020ನೇ ಇಸವಿಯ ಜನವರಿ 11 ಹಾಗೂ 12 ತಾರೀಕುಗಳೆಂದು ದಿನ ನಿಗದಿಯಾಗಿದ್ದು, ಸಮಾವೇಶಕ್ಕೆ ಸಿದ್ಧತೆಗಳು ಆರಂಭಗೊಂಡಿವೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಚಾರಗೋಷ್ಠಿ, ಮಳಿಗೆಗಳು, ರುಚಿಕರ ಭೋಜನ ಹಾಗೂ ವಿವಿಧ ರಂಗಗಳ ದಿಗ್ಗಜರ ಮೆರುಗಿನೊಂದಿಗೆ ವಿಶ್ವದಾದ್ಯಂತ ಇರುವ ನಮ್ಮ ಸಂಘಗಳ ಭಾಗವಹಿಸುವಿಕೆಯೊಂದಿಗೆ ಸಮ್ಮೇಳನವು ಅದ್ದೂರಿಯಿಂದ ಜರಗಲಿದೆ ಎಂದು ಸಮ್ಮೇಳನದ ಸಂಘಟಕರಾದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಬೆಂಗಳೂರು ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಪದಾಧಿಕಾರಿಗಳು ತಿಳಿಸಿದ್ದಾರೆ. ಸಮ್ಮೇಳನದ ಯಶಸ್ಸಿಗಾಗಿ ಹಲವಾರು ಸಮಿತಿಗಳನ್ನು ತಾ 07-07-2019ರಂದು ನಡೆದ ಸಭೆಯಲ್ಲಿ ರಚಿಸಲಾಯಿತು.

## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ) ಮೂಡುಬಿದಿರೆ ವತಿಯಿಂದ ಶಂಕರ ಜಯಂತಿ

ತಾ.19.05.2019ನೇ ರವಿವಾರ ಬೆಳಿಗ್ಗೆ 10.00 ಗಂಟೆಗೆ ಅಲಂಗಾರು ಬಿ. ಜಯರಾಮ ರಾಯರ ಮನೆಯಲ್ಲಿ ಶಂಕರ ಜಯಂತಿಯು ವಿಜೃಂಭಣೆಯಿಂದ ನಡೆಯಿತು. ರುದ್ರಾಭಿಷೇಕ, ರುದ್ರ ಪಾರಾಯಣ ಮಹಾಪೂಜೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳನ್ನು ಅಲಂಗಾರು ಶ್ರೀ ಗಿರೀಶ ಭಟ್‌ರವರು ಸಾಂಗವಾಗಿ ನೆರವೇರಿಸಿಕೊಟ್ಟರು. ಪರಿಷತ್ತಿನ ಸದಸ್ಯರಿಂದ ಶಂಕರ ಪಾರಾಯಣವು ನಡೆಯಿತು. ಮಹಾಪೂಜೆಯ ನಂತರ ಮಕ್ಕಳಿಗೆ ಸ್ತೋತ್ರಗಳ ಕಂಠಪಾಠ ಸ್ಪರ್ಧೆಯು ನಡೆಯಿತು. ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರರಾಯರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮವು ಜರಗಿತು. ಅಧ್ಯಕ್ಷರು ದೀಪ ಬೆಳಗಿಸುವ ಮೂಲಕ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಂಕರ ಜಯಂತಿಯ ಮುಖ್ಯ ಪ್ರವಚನಕಾರರಾಗಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ) ಮಂಗಳೂರು ಇದರ ಪ್ರಧಾನ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಇವರು ಆಗಮಿಸಿ ಪ್ರವಚನವನ್ನು ನೀಡಿ ಸಭಿಕರ ಪ್ರಶಂಸೆಗೆ ಪಾತ್ರರಾದರು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ.ಚಂದ್ರಶೇಖರ ರಾಯರು ಅಧ್ಯಕ್ಷೀಯ ಭಾಷಣದಲ್ಲಿ ಪರಿಷತ್ತಿಗೆ ಸಹಕಾರ ನೀಡುತ್ತಿರುವ ಸದಸ್ಯರಿಗೆ ಹಾಗೂ ಸಮಾಜ ಬಾಂಧವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಸ್ತೋತ್ರಗಳ ಕಂಠಪಾಠ ಸ್ಪರ್ಧೆಗಳಲ್ಲಿ ಭಾಗವಹಿಸಿದ ಮಕ್ಕಳಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು. ಪ್ರವಚನಕಾರರಾಗಿ ಆಗಮಿಸಿದ ಶ್ರೀ ಕರುಣ್ ರಾವ್ ಬೆಳ್ಳೆಯವರನ್ನು ಅಧ್ಯಕ್ಷರು ಶಾಲು ಹೊದಿಸಿ ಸ್ಮರಣಿಕೆಯನ್ನು ನೀಡಿ ಗೌರವಿಸಿದರು. ಕಾರ್ಯದರ್ಶಿ ಯಂ. ಜಗದೀಶ ರಾಯರು ಪ್ರಸ್ತಾವನೆಗೈದರು. ಶ್ರೀ ಬಿ. ಜಯರಾಮ ರಾಯರು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಬಿ.ಕೆ. ವಸಂತರಾಜ ರವರು ಧನ್ಯವಾದ ಸಮರ್ಪಿಸಿದರು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

## ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ


### ಆಗಸ್ಟ್ ತಿಂಗಳಲ್ಲಿ ನಿತ್ಯಪೂಜಾ ಸೇವೆಗೆ ನೋಂದಾಯಿಸಿದವರ ವಿವರ

1. ವಾರ್ಡೋರ್ನ್ ಎಸ್. ಜೈನ್, ಸೂರತ್
2. (ದಿವಂಗತ ಭಾಸ್ಕರ್ ರಾವ್) ಶ್ರೀಮತಿ ಕುಸುಮ ಬಿ.ರಾವ್, ಬನ್ನಂಜೆ
3. ಶ್ರೀಮತಿ. ಪ್ರಿಯಾಂಕ, ಬಿನ್ ಕೆ.ಉಮೇಶ್ ರಾವ್, ದೊಂಬಿವಿಲಿ
4. ವೈ.ಪ್ರಭಾಕರ್ ರಾವ್, ಕುಂಜಿಬೆಟ್ಟು
5. ಪಿ. ರತನ್, ಬಿನ್ ಪಿ. ರಾಜನ್, ಕೋಲ್ಕತ್ತಾ
6. ಸೂರಾಲು ವೈಷ್ಣವಿ ಮಧ್ಯಸ್ಥ, ಬಿನ್ ಸೂರಾಲು ನಾರಾಯಣ ಮಧ್ಯಸ್ಥ, ಕುಂಜಿಬೆಟ್ಟು
7. ಪಿ. ರತನ್, ಬಿನ್ ಪಿ. ರಾಜನ್, ಕೋಲ್ಕತ್ತಾ
8. ಶ್ರೀಮತಿ ವೈ.ಪ್ರೀತಿಮಾಲ, ಬಿನ್ ವೈ.ವಿಠಲ ರಾವ್, ಚಿಟ್ಪಾಡಿ
9. ರೋಶನ್ ಬಿನ್ ಯು.ರಾಮಚಂದ್ರ, ಬೆಂಗಳೂರು
10. ಕಾರ್ತಿಕ್ ಆರ್.ರಾವ್, ಮುಂಬೈ
11. ಎನ್.ಸೀತಮ್ಮ ಮಣಿಪಾಲ
12. ಎಮ್.ಲಲಿತ ಪಿ.ರಾವ್, ಕೋಂ ಎಮ್.ಪಾಲಚಂದ್ರರಾವ್, ಅಜ್ಜರಕಾಡು
13. ಸುಶಾಂತ್ ಎಸ್.ರಾವ್, ಶಶೀಂದ್ರ ಎಲ್.ರಾವ್, ಬೆಂಗಳೂರು
14. ಶ್ರೀ ವರುಣ್, ಬಿನ್ ರಾಜೇಂದ್ರ ಕುಮಾರ್, ನವದೆಹಲಿ
15. ಕೆ.ಎ.ಪಿ ರಾವ್, ನವಿ ಮುಂಬೈ
16. ವೈ.ಪ್ರಭಾಕರ್ ರಾವ್, ಕುಂಜಿಬೆಟ್ಟು
17. ಟಿ.ಆರ್. ಶ್ಯಾನುಭಾಗ್, ಅಂಬಲ್ಪಾಡಿ
18. ಶ್ರೀಮತಿ ಸುಮನ ಹೆಗ್ಡೆ, ಬಿನ್ ಪದ್ಮನಾಭ ಶೆಟ್ಟಿ, ಕುಂಜಿಬೆಟ್ಟು
19. ಶ್ರೀಮತಿ ಆಶಾ ರಾವ್, ಕೋಂ ಶ್ರೀ ಅಶೋಕ್ ರಾವ್, ನಾಸಿಕ್
20. ಅವಿನಾಶ್ ಬೆಳ್ಳೆ, ಬಿನ್ ಮೋಹನ್‌ರಾವ್ ಬೆಳ್ಳೆ, ಥಾಣೆ ವೆಸ್ಟ್
21. (ದಿವಂಗತ ಪಡುಬಿದ್ರಿ ಭೋಜರಾವ್) ಪಡುಬಿದ್ರಿ ಭವಾನಿ ಶಂಕರ ರಾವ್, ಮುಂಬೈ
22. ಅಶೋಕ್ ಎನ್. ಶ್ಯಾನುಭಾಗ್, ಸತಾರ
23. ಕೆ.ಈಶ್ವರ ರಾವ್, ಬಿನ್ ಕೆ. ಕೃಷ್ಣಯ್ಯ, ಪಣಿಯೂರ್
24. ಹೇಮಂತ್ ಬೆಳ್ಳೆ, ಬಿನ್ ಸಿ.ಆರ್, ಬೆಳ್ಳೆ, ಮುಂಬೈ
25. ವಿಭಾ ಮತ್ತು ರಂಜನ್ ಹರಿಕಾರ್, C/o ಪಿ. ಶ್ರೀನಿವಾಸ್ ರಾವ್, ಬೆಂಗಳೂರು
26. ಸ್ವಾತಿ, ಬಿನ್ ವೇಣುಗೋಪಾಲ್ ರಾವ್, ಅಂಬಲ್ಪಾಡಿ
27. ವಿ.ಮನೋಹರ್ ರಾವ್, ಕಾರ್ಕಳ
28. ಸುಪ್ರಿಯ, ಬಿನ್ ರಾಜೇಂದ್ರ ಕುಮಾರ್, ನವದೆಹಲಿ
29. ರಾಹುಲ್ ಬೆಳ್ಳೆ, ಬಿನ್ ರವೀಂದ್ರನಾಥ್ ಬೆಳ್ಳೆ, ಬೆಂಗಳೂರು
30. ಸುಪ್ರಿಯ ಕಾಮತ್, ಮಿತ್ತಬೈಲು, ವಯಾ ಮೂಡುಬಿದ್ರಿ
31. ಅರ್ಜುನ್ ಹಟ್ಟಿಯಂಗಡಿ, ಬಿನ್ ಅರುಣ್ ಹಟ್ಟಿಯಂಗಡಿ, ಮುಂಬೈ
32. ಮಂಜುನಾಥ ಸಿ.ಶೆಟ್ಟಿ, ಬೆಂಗಳೂರು
33. ಶಿವದಾಸ್ ಎಸ್.ಪೈ, ಬಿನ್ ವಿ.ಎನ್. ಪ್ರಭು, ಮುಂಬೈ
34. ಮಂಜುನಾಥ ಸಿ.ಶೆಟ್ಟಿ, ಬೆಂಗಳೂರು
35. ಅಶ್ವಿನಿ ಕುಮಾರ್ ಜೆ. ರಾವ್, ಬಿನ್ ಬಿ. ಜನಾರ್ಧನ ರಾವ್, ದೊಂಬಿವಿಲಿ
36. ಕೌಶಿಕ್, ಎನ್. ಜ್ಞಾನೇಶ್ವರ ಉಪಾಧ್ಯಾಯ, ದೊಡ್ಡಣಗುಡ್ಡೆ
37. ಟಿ.ಕೃಷ್ಣಮೂರ್ತಿ ಶ್ಯಾನುಭಾಗ್, ಇಂದ್ರಾಳಿ
38. ಅಕ್ಷತಾ ಎ.ರಾವ್, ನವದೆಹಲಿ
39. ಶ್ರೀಮತಿ ಸಾವಿತ್ರಿ ದಿನಕರ್ ರಾವ್, ಸಂಪಿಗೆ, ವಯಾ ಮೂಡುಬಿದ್ರಿ
40. ಪ್ರತಿಮಾ ಕಾಮತ್, ಕುಂಜಿಬೆಟ್ಟು
41. ವೈ.ಹರಿಶ್ಚಂದ್ರ ರಾವ್, ಬಿನ್ ಮಧ್ವ ರಾವ್, ಎಲ್ಲೂರು

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣರಾವ್ ಬೆಂಗಳೂರು.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು
**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಮಹಾಸಭೆ ಮತ್ತು ವಾರ್ಷಿಕೋತ್ಸವ

ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ಮಹಾಸಭೆ ಹಾಗೂ ವಾರ್ಷಿಕೋತ್ಸವ ಸಮಾರಂಭವನ್ನು ದಿನಾಂಕ 02.06.2019 ನೇ ರವಿವಾರ ಶ್ರೀ ಬಾಲಗಣಪತಿ – ಪ್ರಸನ್ನ ಪಾರ್ವತಿ–ದೇವಳದ ಸಭಾಂಗಣದಲ್ಲಿ ನಡೆಸಲಾಯಿತು. ಆರಂಭದಲ್ಲಿ ವಾರ್ಷಿಕ ಮಹಾಸಭೆಯು ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವರಾವ್ ಹಾಗೂ ಅಧ್ಯಕ್ಷರಾದ ಶ್ರೀ ಎಂ ಕೆ.ಮೋಹನ್ ರಾವ್ ಇವರ ನೇತೃತ್ವದಲ್ಲಿ ನಡೆಯಿತು. ಶ್ರೀ ಜಗದಾಭಿರಾಮ ಸ್ವಾಮಿಯವರ ಪ್ರಾರ್ಥನೆಯ ಬಳಿಕ ಶ್ರೀಮತಿ ಲಲಿತಾ ಪ್ರಭಾಕರ ರಾವ್ ಇವರು ವೇದಿಕೆಯಲ್ಲಿರುವವರನ್ನು ಹಾಗೂ ನೆರೆದ ಸಮಾಜ ಬಾಂಧವರನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ಕುಮಾರ್‌ರವರು ವಾಚಿಸಿದ ಗತವರ್ಷದ ವರದಿ ಹಾಗೂ ಕೋಶಾಧಿಕಾರಿ ಶ್ರೀ ಬಿ. ಅರವಿಂದ ರಾವ್ ಮಂಡಿಸಿದ ಆಯವ್ಯಯವನ್ನು ಅಂಗೀಕರಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಜ್ಯೋತೀಂದ್ರನಾಥ ವೈ.ಯವರು ಮಾಡಿದರು. ಶ್ರೀ ಶ್ರೀನಿವಾಸ ಶರ್ಮ ಧನ್ಯವಾದವನ್ನಿತ್ತರು. ಬಳಿಕ ಶ್ರೀ ಗಣೇಶ್ ರಾವ್, ಕುಂಭಾಶಿ ಇವರ ನೇತೃತ್ವದಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು.






ಮುಂದೆ ಸಂಘದ ಮಹಿಳಾ ವೇದಿಕೆ ಮತ್ತು ಯುವವೇದಿಕೆಯ ಸದಸ್ಯರಿಂದ ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮವು ನಡೆಯಿತು. ಸುಮಾರು 50ಕ್ಕೂ ಮೀರಿದ ಸದಸ್ಯ–ಸದಸ್ಯೆಯರು ಹಾಗೂ ಪುಟಾಣಿ ಮಕ್ಕಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡುದು ಬಹಳ ಹೆಮ್ಮೆಯ ವಿಷಯ. ಭರತನಾಟ್ಯ, ಜಾನಪದನೃತ್ಯ, ಯಕ್ಷಗಾನ ನೃತ್ಯ, ಸಾಮೂಹಿಕ ನೃತ್ಯ ಹಾಗೂ ಪ್ರಹಸನಗಳನ್ನು ಒಳಗೊಂಡ ಈ ಕಾರ್ಯಕ್ರಮವು ನೆರೆದ ಸಮಾಜಬಾಂಧವರನ್ನು ರಂಜಿಸಿತು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಧರ್ಮಪ್ರಭಾ ವಿದ್ಯಾರಣ್ಯರಾವ್ ಇವರು ಸುಂದರವಾಗಿ ನಿರೂಪಿಸಿದರು.

ಕೊನೆಯಲ್ಲಿ ವಾರ್ಷಿಕೋತ್ಸವದ ಮುಖ್ಯ ಅಂಗವಾದ ಸಭಾ ಕಾರ್ಯಕ್ರಮವನ್ನು ನಡೆಸಲಾಯಿತು. ಇದರ ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಕೆ. ಗಣೇಶ್ ರಾವ್, ಕುಂಭಾಶಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಡುಪಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಸುರತ್ಕಲ್ ಸಂಘದ ಅಧ್ಯಕ್ಷರಾದ ಶ್ರೀ ಮಾಧವ ರಾವ್, ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎನ್.ಕೆ. ಜಗನ್ನಿವಾಸ ರಾವ್ ಆಗಮಿಸಿದ್ದರು. ನಮ್ಮ ಸಂಘದ ಅಧ್ಯಕ್ಷರು, ಗೌರವಾಧ್ಯಕ್ಷರು, ಯುವ ವೇದಿಕೆಯ ಅಧ್ಯಕ್ಷರು ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ವಿಜಯವಲ್ಲಿ ಯವರ ಪ್ರಾರ್ಥನೆಯ ಬಳಿಕ ಶ್ರೀಮತಿ ಸುಮಂಗಲಾ ನಯನಾಭಿರಾಮ ಸ್ವಾಮಿಯವರು ವೇದಿಕೆಯಲ್ಲಿರುವ ಗಣ್ಯರನ್ನು ಹಾಗೂ ನೆರೆದ ಸಮಾಜಬಾಂಧವರನ್ನು ಸ್ವಾಗತಿಸಿದರು. ನಂತರ ನಡೆದ ಸಾಧಕ ಸನ್ಮಾನದಲ್ಲಿ ಕೃಷಿಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ ಮಾನ್ಯ ರಾಷ್ಟ್ರಪತಿಯವರಿಂದ ಪ್ರಶಸ್ತಿ ಪುರಸ್ಕೃತರಾದ ಶ್ರೀ ಬಿ.ಕೆ. ದೇವರಾವ್ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಅಂತೆಯೇ ಭರತನಾಟ್ಯದ ವಿದ್ವತ್ ಪರೀಕ್ಷೆಯಲ್ಲಿ ಮೂರನೇ ರ್‍ಯಾಂಕ್ ವಿಜೇತೆ ಡಾ। ಭಾಗ್ಯಶ್ರೀ ಗುರುಪ್ರಸಾದ್, ಸ್ನಾತಕೋತ್ತರ ಪದವಿ (ಎಮ್.ಎಸ್ಸಿ) ಯಲ್ಲಿ ಚಿನ್ನದ ಪದಕಗಳಿಸಿದ ಶ್ರೀಮತಿ ಅಕ್ಷತಾ ಶ್ರೀಚರಣ್ , ಸ್ನಾತಕೋತ್ತರ ಪದವಿ (ಎಮ್.ಬಿ.ಎ) ಯಲ್ಲಿ 10 ನೇ ರ್‍ಯಾಂಕ್ ಪಡೆದ ಕೆ.ವರುಣ್, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 5 ನೇ ರ್‍ಯಾಂಕ್ ವಿಜೇತೆ ಕು. ನವ್ಯಶ್ರೀ ಹಾಗೂ ಪಿ.ಯು.ಸಿಯಲ್ಲಿ 11ನೇ ರ್‍ಯಾಂಕ್ ವಿಜೇತ ವಿನೀತ್ ಆರ್.ರಾವ್ ಇವರನ್ನು ಸನ್ಮಾನ ಪತ್ರ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಸನ್ಮಾನಿತರಲ್ಲಿ ಶ್ರೀಮತಿ ಭಾಗ್ಯಶ್ರೀ ಗುರುಪ್ರಸಾದ್, ಶ್ರೀಮತಿ ಅಕ್ಷತಾ ಶ್ರೀಚರಣ್, ಮತ್ತು ಕೆ.ವರುಣ್ ತಮ್ಮ ಅನಿಸಿಕೆಗಳನ್ನು ತಿಳಿಸಿ, ತಮ್ಮ ಸಾಧನೆಯ ಹಾದಿಯಲ್ಲಿ ಸಹಕರಿಸಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಬಳಿಕ ನಮ್ಮ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.90 ಕ್ಕಿಂತಲೂ ಅಧಿಕ ಅಂಕಗಳನ್ನು ಪಡೆದ ನಾಲ್ವರು ವಿದ್ಯಾರ್ಥಿಗಳನ್ನು ಶಾಲು ಹಾಕಿ ಪುರಸ್ಕರಿಸಲಾಯಿತು. ಅಂತೆಯೇ ವಿದ್ಯಾರ್ಥಿಗಳಿಗೆ ಒಟ್ಟು ರೂ.1,30,000ಗಳ ಪ್ರೋತ್ಸಾಹಧನವನ್ನು ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಕೆ. ಗಣೇಶ್ ರಾವ್, ಮುಖ್ಯ ಅತಿಥಿಗಳಾದ ಶ್ರೀ ಮಂಜುನಾಥ ಹೆಬ್ಬಾರ್, ಶ್ರೀ ಎನ್.ಕೆ. ಜಗನ್ನಿವಾಸ ರಾವ್ ಹಾಗೂ ಶ್ರೀ ಮಾಧವ ರಾವ್ ಇವರು ಸಂಘದ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ಸಲ್ಲಿಸಿ ಶುಭ ಹಾರೈಸಿದರು. ನಮ್ಮ ಸಂಘದ ಹಿರಿಯರಾದ ಹಾಗೂ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್ ದಂಪತಿಗಳನ್ನು ಶಾಲು ಹೊದಿಸಿ, ಪೇಟಾ ಇಟ್ಟು ಗೌರವಿಸಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ಅರುಣ್ ಕುಮಾರ್ ಹಾಗೂ ಶ್ರೀಮತಿ ರಮ್ಯಾ ಇವರು ನಿರೂಪಿಸಿದರು. ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್ ಇವರು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಸರ್ವರಿಗೂ ಧನ್ಯವಾದಗಳನ್ನಿತ್ತರು, ಬಳಿಕ ಪುಷ್ಕಳವಾದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಕಾಸರಗೋಡು

**ರಿ.ನಂ. 28795, 24/535 ಬೇರಿಕ್ ರಸ್ತೆ, ಕಾಸರಗೋಡು 671121 ಕೇರಳ.**

### ಎಂ. ವ್ಯಾಸ ಸ್ಮಾರಕ ಕಥಾ ಸ್ಪರ್ಧೆ 2019

ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ನಮ್ಮ ಸಮಾಜದ ಹೆಮ್ಮೆಯ ಕಥೆಗಾರರಾಗಿದ್ದ ಎಂ.ವ್ಯಾಸ ಸ್ಮರಣಾರ್ಥ ನಮ್ಮ ಸಮಾಜ ಬಾಂಧವರಿಗಾಗಿ ಕಥಾಸ್ಪರ್ಧೆಯೊಂದನ್ನು ಏರ್ಪಡಿಸಿದ್ದೇವೆ. ಅವರ ಸುಪುತ್ರ ಡಾ। ತೇಜಸ್ವಿ ವ್ಯಾಸ್ ಈ ಸ್ಪರ್ಧೆಯ ಪ್ರಾಯೋಜಕರಾಗಿದ್ದಾರೆ. ವಿಜೇತರಿಗೆ ರೂ.5,000 (ಪ್ರಥಮ) ಮತ್ತು ರೂ.3,000 (ದ್ವಿತೀಯ) ನಗದು ಬಹುಮಾನವಿದೆ.

**ನಿಯಮ, ನಿಬಂಧನೆಗಳು**

- ಈ ಸ್ಪರ್ಧೆಯು ಸ್ಥಾನಿಕ ಬ್ರಾಹ್ಮಣ ಸಮಾಜದ ಸದಸ್ಯರಿಗೆ ಮಾತ್ರ ಸೀಮಿತವಾಗಿದ್ದು ಅನ್ಯ ಸಮಾಜದವರು ಭಾಗವಹಿಸುವಂತಿಲ್ಲ.
- ಸ್ಪರ್ಧೆಗೆ ಕಳುಹಿಸುವ ಕಥೆಗಳು ಸ್ವಂತ ಕೃತಿಯಾಗಿದ್ದು ಅಪ್ರಕಟಿತವಾಗಿರಬೇಕು.
- ಕಥೆಗಳು 750 ಪದಗಳಿಗೆ ಮೀರಬಾರದು. (ಕೈಬರಹದ ಸುಮಾರು 7/8, ಬೆರಳಚ್ಚಿನ 5/6 ಪುಟಗಳು)
- ಸ್ಫುಟವಾದ ಕೈಬರಹದ ಅಥವಾ ಬೆರಳಚ್ಚು ಮಾಡಿದ ಪ್ರತಿಯನ್ನು 2019 ಅಗೋಸ್ತು 31 ರೊಳಗೆ ನಮಗೆ ತಲುಪುವಂತೆ ಅಂಚೆಯ ಮೂಲಕ ಕಳುಹಿಸಿಕೊಡಬೇಕು.
- ದಯವಿಟ್ಟು ಇ ಮೈಲ್ /ವಾಟ್ಸಾಪ್ ಮೂಲಕ ಕಳುಹಿಸಬೇಡಿ.
- ಕಥೆಗಾರರು ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ (ಇದ್ದರೆ ಇ ಮೈಲ್/ ವಾಟ್ಸಾಪ್ ಸಂಖ್ಯೆ) ಕಥೆಯು ಸ್ವಂತ ಕೃತಿಯಾಗಿದೆಯೆಂಬ ದೃಢೀಕರಣ ಇವುಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಲಗತ್ತಿಸಬೇಕು.
- ವಿಜೇತರಿಗೆ ಅಂಚೆ/ದೂರವಾಣಿಯ ಮೂಲಕ ತಿಳಿಸಲಾಗುವುದು ಮತ್ತು ಬಹುಮಾನಗಳನ್ನು ಅಕ್ಟೋಬರ್ ನವಂಬರ್ ತಿಂಗಳಿನಲ್ಲಿ ನಡೆಯುವ ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಸಮಾವೇಶದಲ್ಲಿ ವಿತರಿಸಲಾಗುವುದು.
- ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿದ್ದು ಆ ಬಗ್ಗೆ ಯಾವುದೇ ಪತ್ರವ್ಯವಹಾರ/ ಮಾತುಕತೆಗೆ ಅವಕಾಶವಿಲ್ಲ.
- ಬಹುಮಾನಿತ ಕಥೆಗಳನ್ನು ಸಭಾದ ವಾರ್ಷಿಕ ಸಂಚಿಕೆ 'ಶಿವಗಂಗಾ' ದಲ್ಲಿ ಪ್ರಕಟಿಸಲಾಗುವುದು.

ಆಸಕ್ತ ಸ್ಥಾನಿಕ ಬ್ರಾಹ್ಮಣ ಬಾಂಧವರು ತಮ್ಮ ಕೃತಿಗಳನ್ನು 2019 ಅಗೋಸ್ತು 31 ರೊಳಗೆ ತಲುಪುವಂತೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**– ಸುಕುಮಾರ ಆಲಂಪಾಡಿ**

ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಭಾ ಕಾಸರಗೋಡು

'ಸುಪ್ರಭಾತ', ಆಲಂಪಾಡಿ ಅಂಚೆ, ಕಾಸರಗೋಡು 671123, ಕೇರಳ

**ಹೆಚ್ಚಿನ ಮಾಹಿತಿಗಾಗಿ :**

**ಸುಕುಮಾರ ಆಲಂಪಾಡಿ (9495726581) ಡಾ। ತೇಜಸ್ವಿ ವ್ಯಾಸ್ (9446776602), ವಸಂತರಾಜ ವಿ.ಪಿ. (9497137210) ಮನೋಹರ ಎ. (9495180294)**

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.**

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

**SAMPATH KUMAR** Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

## ಶ್ರೀ ರವೀಂದ್ರ ಭಂಡಿ ಮತ್ತು ಶ್ರೀಮತಿ ವಾಣಿ ಭಂಡಿರವರ ವೈವಾಹಿಕ ಜೀವನದ ರಜತ ಸಂಭ್ರಮ



ತಾ.20.05.2019ರ ಸೋಮವಾರ ದಂದು ಮಹತೋಭಾರ ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಪೆರ್ಡೂರು ಸನ್ನಿಧಿಯಲ್ಲಿ ಪೆರ್ಡೂರು ದಿ| ಗೋಪಾಲಕೃಷ್ಣ ಭಂಡಿಯವರ ಪುತ್ರ ಶ್ರೀ ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿ ಭಂಡಿಯವರ ವೈವಾಹಿಕ ಜೀವನದ ರಜತ ಸಂಭ್ರಮ ವಿಜೃಂಭಣೆಯಿಂದ ಜರಗಿತು.

ಈ ಸಂದರ್ಭದಲ್ಲಿ ಶ್ರೀ ರವೀಂದ್ರ ಭಂಡಿಯವರು 25 ವರ್ಷ ವೈವಾಹಿಕ ಜೀವನವನ್ನು ಪೂರೈಸಿದ 25 ದಂಪತಿ ಗಳನ್ನು ಗೌರವಿಸಿ ಅಭಿನಂದಿಸಿದರು. ಈ ಶುಭ ಸಂದರ್ಭದಲ್ಲಿ ಕೀರ್ತನ ಕೇಸರಿ, ಹರಿದಾಸ ಕಾರ್ಕಳ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ, ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಸಿ. ರಾವ್ ಶಿವಪುರ ಅವರು ಮೊತ್ತ ಮೊದಲಿಗೆ ದಿವಂಗತ ಗೋಪಾಲಕೃಷ್ಣ ಭಂಡಿಯವರನ್ನು ನೆನಪಿಸಿ, 45 ವರ್ಷದ ಹಿಂದೆ ದಿ| ಭಂಡಿಯುವರು ನನ್ನ ಹರಿಕಥೆಯುನ್ನು ಬೆನ್ನುತಟ್ಟಿ ಪ್ರೋತ್ಸಾಹಿಸಿದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಶ್ರೀ ಚಂದ್ರಶೇಖರ ಅಡಿಗ, ನಿವೃತ್ತ ಎ.ಜಿ.ಎಮ್, ಶ್ರೀ ಜಯಪ್ರಕಾಶ ಭಟ್ ನಿವೃತ್ತ ಎ.ಜಿ.ಎಮ್ ಸಿಂಡಿಕೇಟ್ ಬ್ಯಾಂಕ್ ಮತ್ತು ಯಾಜಿ ಡಾ| ನಿರಂಜನ ಭಟ್ ಹಾಗೂ ನೂರಾರು ಹಿತೈಷಿಗಳು ಆಗಮಿಸಿದ್ದು ರವೀಂದ್ರ ಭಂಡಿ ಮತ್ತು ವಾಣಿ ಭಂಡಿ ಮಕ್ಕಳಾದ ಪ್ರಗತಿ ಭಂಡಿ ಮತ್ತು ಪ್ರಣಮ್ಯ ಭಂಡಿ ಇವರಿಗೆ ಶುಭ ಹಾರೈಸಿದರು.

## ಬಿ.ಎಂ. ಅರ್ಜುನ್ ಅವರಿಗೆ ಪಿ.ಹೆಚ್.ಡಿ ಪದವಿ ಪ್ರಧಾನ



ಕನ್ಯಾನದಲ್ಲಿರುವ ಮಡಿಯಾಲ ಬಾಲಕೃಷ್ಣ ರಾವ್ ಮತ್ತು ಗಾಯತ್ರಿ ಬಿ.ಯಂ. ದಂಪತಿಗಳ ಪ್ರಥಮ ಪುತ್ರ ಅರ್ಜುನ್ ಬಿ.ಯಂ. ಇವರು ಭಾರತದ ಅತ್ಯಂತ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಐ.ಐ.ಟಿ. ಕಾನ್ಪುರ ವಿಶ್ವವಿದ್ಯಾಲಯದಿಂದ Urban Flood Modeling and Management using advanced remote sensing Techniques ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧ ಮಂಡಿಸಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿರುವರು.

ಪ್ರಸ್ತುತ ಇವರು ಇಸ್ರೋ ಸಂಸ್ಥೆಯ ಮೇಘಾಲಯದ ಶಾಖೆ NESAC (North Eastern Space Application Centre)ನಲ್ಲಿ ವಿಜ್ಞಾನಿಯಾಗಿ ಸಂಶೋಧನೆ ನಡೆಸುತ್ತಿದ್ದಾರೆ.

ಇವರು ಪುತ್ತೂರಿನ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ B.E. ಪದವಿಯನ್ನು ಪಡೆದಿದ್ದು ಬಳಿಕ ಸುರತ್ಕಲ್ NITK ಯಲ್ಲಿ M.Tech. ಪದವಿಯನ್ನು ಪಡೆದಿದ್ದರು.




ಎಮ್. ದೇವಾನಂದ್ ಭಟ್

Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಸುಬ್ರಹ್ಮಣ್ಯ ಸಭಾದಲ್ಲಿ ಭಜನಾ ತರಗತಿ ಉದ್ಘಾಟನೆ, ಹಾರ್ಮೋನಿಯಂ ಕೊಡುಗೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಿನಾಂಕ 12–6–2019ರಂದು ಭಜನಾ ತರಗತಿಯ ಉದ್ಘಾಟನಾ ಕಾರ್ಯಕ್ರಮ ಸಾಯಂಕಾಲ 4.00 ಗಂಟೆಗೆ ನಡೆಯಿತು. ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಸ್ವಾಗತಿಸಿದರು. ಭಜನಾ ತರಗತಿಯ ಕುರಿತು ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮ ನವೀನ್ ಕುಮಾರ್ ಸಂಕ್ಷಿಪ್ತವಾಗಿ ವಿವರಿಸಿದರು. ಭಜನಾ ಗುರುಗಳಾದ ಪೊಳಲಿ ಶ್ರೀ ಸುಬ್ಬರಾವ್‌ರವರನ್ನು ಫಲ, ಪುಷ್ಪ ತಾಂಬೂಲ ಕೊಟ್ಟು ಸ್ವಾಗತಿಸಲಾಯಿತು. ವೇದಿಕೆಯಲ್ಲಿದ್ದ ಗಣ್ಯರು ದೀಪ ಬೆಳಗಿಸಿ ಭಜನಾ ತರಗತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಪೊಳಲಿ ಶ್ರೀ ಸುಬ್ಬರಾವ್‌ರವರ ಕಿರುಪರಿಚಯವನ್ನು ಯುವ ವೇದಿಕೆ ಕಾರ್ಯದರ್ಶಿ ಶ್ರೀ ಸುರೇಶ್ ಕಡಬರವರು ಸಭೆಗೆ ನೀಡಿದರು. ಶ್ರೀ ಸುಬ್ಬರಾವ್‌ರವರು ಭಜನೆಯನ್ನು ಹೇಳಿ ಕೊಡುವುದರ ಮೂಲಕ ಭಜನಾ ತರಬೇತಿ ಕಾರ್ಯಕ್ರಮಕ್ಕೆ ಚಾಲನೆಯಿತ್ತರು. ಸುಮಾರು 50 ಮಂದಿ ಭಜನಾ ಆಸಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಪೊಳಲಿ ಶ್ರೀ ಸುಬ್ಬರಾವ್‌ರವರು ಇನ್ನು ಮುಂದೆ ಪ್ರತೀ ಬುಧವಾರ ಸಂಜೆ 4.00 ರಿಂದ 5.00 ಗಂಟೆ ತನಕ ಹಾರ್ಮೋನಿಯಂ ಹಾಗೂ 5.00 ರಿಂದ 6.00 ಗಂಟೆ ವರೆಗೆ ಭಜನಾ ಕಲಿಕಾ ತರಬೇತಿಯನ್ನು ನೀಡುತ್ತೇನೆ ಎಂದು ತಿಳಿಸಿದರು. ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಮನೀಶ್ ರಾವ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಅಂದಿನ ಕಾರ್ಯಕ್ರಮ ಸಂಪನ್ನಗೊಂಡಿತು.

ಇದೇ ಸಂದರ್ಭದಲ್ಲಿ ನಮ್ಮ ಸಮಾಜದ ಕಾರ್ಪೊರೇಶನ್ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಜ್ಞಾನೇಶರ ರಾವ್‌ರವರ ಸ್ಮರಣಾರ್ಥ ಅವರ ಪತ್ನಿ ಉಷಾಲತಾ ಮತ್ತು ಮಕ್ಕಳಾದ ಪವನ್ ಕುಮಾರ್ ಹಾಗೂ ಸಚಿನ್ ಕುಮಾರ್‌ರವರು ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ಮಹಿಳಾ ವೇದಿಕೆಯವರು ನಡೆಸುತ್ತಿರುವ ಭಜನಾ ತರಗತಿಗೆ ಸುಮಾರು ರೂ. 16000/– ಮೌಲ್ಯದ ಹಾರ್ಮೋನಿಯಂನ್ನು ಕೊಡುಗೆಯಾಗಿ ನೀಡಿದರು. ಸದನದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಹಾಗೂ ಮಹಿಳಾ ವೇದಿಕೆ ಅಧ್ಯಕ್ಷೆ ಕುಸುಮಾ ನವೀನ್ ಕುಮಾರ್ ಹಾಗೂ ಸದಸ್ಯರು ಸ್ವೀಕರಿಸಿದರು. ಕುಟುಂಬದ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸಭೆಯ ಖಜಾಂಚಿ ಶ್ರೀಕಾಂತ್‌ರವರು ವಂದಿಸಿದರು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘**ಪಾರಾಯಣ**’’ ಸಂಜೆ ಗಂಟೆ 4-30ರಿಂದ

**ತಾ.20-07-2019 ಮತ್ತು ತಾ.19-08-2019 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.15-07-2019 ಮತ್ತು ತಾ.11-08-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.22-07-2019 ಮತ್ತು ತಾ.05-08-2019 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| **16–07–2019** | ಗುರು ಪೂರ್ಣಿಮಾ<br>ಕರ್ಕಾಟಕ ಸಂಕ್ರಮಣ |
| **17–07–2019** | ಗ್ರೀಷ್ಮಋತು, ಆಷಾಢ ಮಾಸದ ಕೃಷ್ಣಪಕ್ಷಾರಂಭ<br>ಆಟಿ ತಿಂಗಳು ಆರಂಭ<br>ದಕ್ಷಿಣಾಯನ ಆರಂಭ |
| **20–07–2019** | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಗಂಟೆ 9–37ಕ್ಕೆ |
| **24–07–2019** | ಶುಕ್ರ ಮೌಢ್ಯ ಆರಂಭ |
| **28–07–2019** | ಸರ್ವೈಕಾದಶಿ |
| **01–08–2019** | ಆಟಿ ಅಮಾವಾಸ್ಯೆ |
| **02–08–2019** | ವರ್ಷ ಋತು, ಶ್ರಾವಣ ಮಾಸದ ಶುಕ್ಲಪಕ್ಷಾರಂಭ |
| **05–08–2019** | ನಾಗರ ಪಂಚಮಿ |
| **09–08–2019** | ವರಮಹಾಲಕ್ಷ್ಮೀ ವ್ರತ |
| **11–08–2019** | ಸರ್ವೈಕಾದಶಿ |
| **14–08–2019** | ಋಗುಪಾಕರ್ಮ |
| **15–08–2019** | ಯಜುರುಪಾಕರ್ಮ, ಹುಣ್ಣಿಮೆ |
| **16–08–2019** | ವರ್ಷ ಋತು, ಶ್ರಾವಣ ಮಾಸದ ಕೃಷ್ಣಪಕ್ಷಾರಂಭ |
| **17–08–2019** | ಸಿಂಹ ಸಂಕ್ರಮಣ |
| **19–08–2019** | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಗಂಟೆ 9–29ಕ್ಕೆ |

## ಶ್ರೀ ಕಾಮಾಕ್ಷೀಶಾರದಾ ಪೀಠಮ್
## ಘನಪುರೀ ಸಂಸ್ಥಾನ, ಶ್ರೀ ಕೋದಂಡಾಶ್ರಮ ಮಠ,
## ಶ್ರೀ ಕಾಮಾಕ್ಷೀ ಶಾರದಾದೇವಿಯ ಸನ್ನಿಧಿ, ಹೆಬ್ಬೂರು

**ತುಮಕೂರು ಜಿಲ್ಲೆ, ಕರ್ನಾಟಕ-572120. ದೂರವಾಣಿ : 0816-2241032**

**ಚಾತುರ್ಮಾಸ್ಯ ಹಾಗೂ ಋಕ್ಸಂಹಿತಾ ಯಾಗ ಆಹ್ವಾನ ಪತ್ರಿಕಾ**
**ಜುಲೈ 16 ನೇ ಮಂಗಳವಾರ 2019ರಿಂದ**
**ಸೆಪ್ಟಂಬರ್ 13 ನೇ ಶುಕ್ರವಾರ 2019ರವರೆಗೆ**

ಆತ್ಮೀಯ ಸದ್ಭಕ್ತರೇ,

ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರು ಶ್ರೀ ವಿಕಾರಿ ಸಂವತ್ಸರದ ಚಾತುರ್ಮಾಸ್ಯ ವ್ರತವನ್ನು ಭಕ್ತ-ಶಿಷ್ಯ ಜನರ ಅಪೇಕ್ಷೆಯ ಮೇರೆಗೆ ಶ್ರೀ ಘನಪುರೀ ಸಂಸ್ಥಾನ ಕೋದಂಡಾಶ್ರಮ ಮಠ, ಹೆಬ್ಬೂರು, ತುಮಕೂರು ತಾಲೂಕು ಇಲ್ಲಿ ಆಚರಿಸಲು ಸಂಕಲ್ಪಿಸಿರುತ್ತಾರೆ.

ದಿನಾಂಕ 28-07-2019 ರಿಂದ 04-08-2019 ರ ಪರ್ಯಂತ ಋಕ್ಸಂಹಿತಾ ಯಾಗ ಶ್ರೀ ಮಠದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರ ಸಾನಿಧ್ಯದಲ್ಲಿ ಲೋಕಕಲ್ಯಾಣಾರ್ಥ ನೆರವೇರಲಿದೆ.

ದಿನಾಂಕ 28-07-2019 ಭಾನುವಾರದಂದು ಋಕ್ಸಂಹಿತಾಯಾಗ ಆರಂಭಗೊಂಡು 04-08-2019 ಭಾನುವಾರದಂದು ಪೂರ್ಣಾಹುತಿ ಇರುತ್ತದೆ. ಈ ಕಾರ್ಯಕ್ರಮದಲ್ಲಿ ವಿಶೇಷ ಅಭ್ಯಾಗತರಾಗಿ
**ವೇದಬ್ರಹ್ಮ ಶ್ರೀ ಡಾ॥ ಎಸ್. ಆರ್. ನರಸಿಂಹಮೂರ್ತಿ**
ಉಪಸ್ಥಿತರಿರುತ್ತಾರೆ. ಪೂರ್ಣಾಹುತಿಯ ನಂತರ 11 ಗಂಟೆಗೆ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳ ಆಶೀರ್ವಚನ, ಈ ಮಂಗಳ ಮಹೋತ್ಸವಕ್ಕೆ ತಾವೆಲ್ಲರೂ ಕುಟುಂಬ ಸಮೇತರಾಗಿ ಹಾಗೂ ಬಂಧು ಮಿತ್ರರೊಂದಿಗೆ ಈ ಸಂದರ್ಭದಲ್ಲಿ ಭಾಗವಹಿಸಿ, ವೇದನಾರಾಯಣನ ಮತ್ತು ಶ್ರೀ ಕಾಮಾಕ್ಷೀಶಾರದಾಂಬೆಯ ಶ್ರೀಮುಡಿ ಪ್ರಸಾದವನ್ನು ಸ್ವೀಕರಿಸಿ ಶ್ರೀ ಕಾಮಾಕ್ಷೀಶಾರದಾಂಬಾ ಕೃಪೆಗೂ ಹಾಗೂ ಶ್ರೀ ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೂ ಪಾತ್ರರಾಗಬೇಕಾಗಿ ಕೋರುತ್ತೇವೆ. ಸಮಾಜಬಾಂಧವರು, ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಬೇಕೆಂದು ವಿಜ್ಞಾಪನೆ.

**ಶ್ರೀ ಬಿ.ಕೆ. ಶ್ರೀಧರ್ (9845092591).**
**ಆಡಳಿತಾಧಿಕಾರಿ ಹಾಗೂ ವಿಶ್ವಸ್ಥಮಂಡಳಿಯ ಸದಸ್ಯರು, ಶ್ರೀಮಠ, ಹೆಬ್ಬೂರು**

ಹೆಚ್ಚಿನ ಮಾಹಿತಿಗಾಗಿ :
**ವಿಶ್ವಸ್ತ ಮಂಡಳಿ ಸದಸ್ಯ ಶ್ರೀ ಸತ್ಯನಾರಾಯಣ ಹೆಚ್.ಕೆ : 9448927138**
**ವ್ಯವಸ್ಥಾಪಕರು : ಸುಬ್ರಹ್ಮಣ್ಯರಾವ್ ಕೆ. : 9901994409**

ಸರ್ವರಿಗೂ ಆದರದ ಸ್ವಾಗತ




ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿಅಮ್ಮನವರ ದೇವಸ್ಥಾನದಲ್ಲಿ ಶ್ರೀ ದೇವರ ಕಲಾಚೈತನ್ಯಾಭಿವೃದ್ಧಿಗಾಗಿ ಕಲಾತತ್ವ ಹೋಮ, ತತ್ವ ಕಲಶಾಭಿಷೇಕ ಹಾಗೂ ಶ್ರೀ ನಾಗದೇವರ ಸನ್ನಿಧಿಯಲ್ಲಿ ಪವಮಾನಸೂಕ್ತ ಕಲಶಾಭಿಷೇಕ ಜರುಗಿತು


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಲೆಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams


## ಶಾಂಕರ ತತ್ವ ಪ್ರಚಾರ ಸಮಿತಿಯಿಂದ ಶ್ರೀ ಶಂಕರ ಜಯಂತಿ



ಶ್ರೀ ಕ್ಷೇತ್ರ ಶೃಂಗೇರಿ ಶಾರದಾ ಪೀಠದ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ವತಿಯಿಂದ ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿದಾನಂಗಳವರ ಆದೇಶದಂತೆ ಉಡುಪಿ ಜಿಲ್ಲಾ ಸಂಘಟನೆಯು ಉಡುಪಿ ಚಿಟ್ಪಾಡಿ ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ದಿನಾಂಕ 11-05- 2019ನೇ ಶನಿವಾರ ಉಡುಪಿಯ ಇತರ ಸಂಘ ಸಂಸ್ಥೆಗಳ ಸಹಯೋಗ ದೊಂದಿಗೆ ಸಾಮೂಹಿಕ ಶಂಕರ ಜಯಂತ್ಯುತ್ಸವವನ್ನು ಆಚರಿಸಿತು.

ಸಮಾರಂಭದ ಅಧ್ಯಕ್ಷರಾಗಿ ಉಡುಪಿ ಪೂರ್ಣಪ್ರಜ್ಞಾ ಕಾಲೇಜಿನ ಮಾಜಿ ಪ್ರಾಂಶುಪಾಲರೂ, ಜ್ಞಾನ ಭಾರತಿ ಉಡುಪಿಯ ಕಾರ್ಯದರ್ಶಿಗಳೂ, ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲಾಧ್ಯಕ್ಷರೂ ಆದ ಡಾ। ಎಸ್ ಎಲ್ ಕಾರ್ಣಿಕ್ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಶಾಂಕರ ತತ್ವ ಪ್ರಸಾರ ಅಭಿಯಾನದ ಜಿಲ್ಲಾ ಸಂಚಾಲಕರಾದ ಶ್ರೀ ಪ್ರಪುಲ್ಲಚಂದ್ರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ ಉಡುಪಿಯಲ್ಲಿ ಶಾಂಕರ ತತ್ವ ಪ್ರಸಾರದ ಉದ್ದೇಶಕ್ಕಾಗಿ ಶೃಂಗೇರಿಯ ಶಿಷ್ಯವರ್ಗವೆಲ್ಲ ಒಂದೇ ವೇದಿಕೆಯ ಮೂಲಕ ಕಾರ್ಯವೆಸಗುವ ಅಗತ್ಯವಿದೆ. ಅದಕ್ಕಾಗಿ ಎಲ್ಲರೂ ಸಹಕಾರ ನೀಡಬೇಕು ಎನ್ನುತ್ತಾ ಎಲ್ಲರನ್ನು ಸ್ವಾಗತಿಸಿದರು.

ಪ್ರಧಾನ ಉಪನ್ಯಾಸಕರಾಗಿ ಆಗಮಿಸಿದ್ದ ಸ್ಥಳೀಯ ಪೂರ್ಣಪ್ರಜ್ಞಾ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಶ್ರೀ ಟಿ ಎಸ್ ರಮೇಶ್‌ರವರು ಶಂಕರರ ಜೀವನ ಮತ್ತು ಸಂದೇಶಗಳ ಬಗ್ಗೆ ಮಹತ್ವಪೂರ್ಣವಾದ ಮಾಹಿತಿಯನ್ನು ಶಂಕರರಿಂದ ರಚಿತವಾದ ಸಂಸ್ಕೃತ ಕೃತಿಗಳ ಶ್ಲೋಕಗಳ ಆಧಾರವಾಗಿ ಸೂಕ್ತ ಉದಾಹರಣೆಯೊಂದಿಗೆ ವಿವರಣೆ ನೀಡಿದರು.

ಬೆಂಗಳೂರಿನ ಖ್ಯಾತ ಇಂಜಿನಿಯರ್ ಹಾಗೂ ವಿಕಾಸ ಕವಿ ಶ್ರೀ ಬಿ ವಿ ರಾವ್ ಶಂಕರರ ಅದ್ವೈತವಾದವನ್ನು ವೈಜ್ಞಾನಿಕವಾಗಿ ಹೇಗೆ ಒಪ್ಪಿಕೊಳ್ಳಬಹುದೆಂಬ ವಿಚಾರಗಳನ್ನು ವರ್ತಮಾನ ಕಾಲದ ಹಲವು ಉದಾಹರಣೆಗಳೊಂದಿಗೆ ವಿವರಿಸಿದರು.

ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಚಿಟ್ಪಾಡಿಯ ಶ್ರೀ ಶಾರದಾಂಬಾ ದೇವಳದ ಆಡಳಿತ ಮುಖ್ಯಸ್ಥರಾದ ಶ್ರೀ ಜಯರಾಮ ರಾವ್, ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್, ಉಡುಪಿ ಹವ್ಯಕ ಸಭಾದ ಅಧ್ಯಕ್ಷ ಶ್ರೀ ಡಿ ಸದಾಶಿವ ಭಟ್, ಸಗ್ರಿ ವಿಶ್ವ ಬ್ರಾಹ್ಮಣ ಸಮಾಜದ ಶ್ರೀ ಬಿ ಎ ಆಚಾರ್, ಕಲ್ಯಾಣಪುರದ ವೀರಭದ್ರ ದೇವಸ್ಥಾನದ ಆಡಳಿತ ಮುಕ್ತೇಸರರಾದ ಶ್ರೀ ಜ್ಯೋತಿ ಪ್ರಸಾದ್ ಶೆಟ್ಟಿಗಾರ್, ಉಡುಪಿ ಕರಾಡ ಸಮಾಜದ ಶ್ರೀ ಶ್ರೀಧರ ಭಟ್,ಉಡುಪಿ ಮರಾಠಿಸಮಾಜದ ಅಧ್ಯಕ್ಷ ಶ್ರೀಅನಂತ ನಾಯ್ಕ್, ಗಾಯತ್ರಿ ಮಹಿಳಾ ಮಂಡಲದ ಅಧ್ಯಕ್ಷೆ ಮೊದಲಾದ ಗಣ್ಯರಿಗೆ ಶ್ರೀ ಕ್ಷೇತ್ರ ಶೃಂಗೇರಿಯ ಪ್ರಸಾದ ಹಾಗೂ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಮಹಿಳೆಯರಿಂದ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರಿ ಪಾರಾಯಣ ಹಾಗೂ ಭಜನೆ ನೆರವೇರಿತು. ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರ್ವಹಣೆ ಮಾಡಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.



ಉಡುಪಿ ಶ್ರೀಕೃಷ್ಣ ಮಠದ ಸ್ವರ್ಣ ಗೋಪುರ ಸಮರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸಲು ತಿರುಪತಿ ತಿರುಮಲ ದೇವಸ್ಥಾನದ ಶ್ರೀನಿವಾಸ ಪರಿವಾರ ದೇವರ ಯಾತ್ರೆಯ ಮಧ್ಯದಲ್ಲಿ ಕೂಡ್ಲು ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನದ ಅರ್ಚಕ ಪ್ರಸನ್ನ ಶ್ಯಾನುಭೋಗರ ಮನೆಯಲ್ಲಿ ನಡೆದ ಮಧ್ಯಾಹ್ನ ಪೂಜಾ ಕಾರ್ಯಕ್ರಮ.

## ಭಕ್ತಿಗೀತೆ–7

ಕೈಲಾಸದೊಡೆಯ ಆ ಮುಕ್ಕಣ್ಣ ಪರಶಿವನು
ಬೆಳ್ಳಿಬೆಟ್ಟದ ತನ್ನ ಮನೆಯ ಬಿಟ್ಟಿಹನು
ಒಳ್ಳೆ ಭಕುತರನರಸಿ ಧರೆಗಿಳಿದು ಬಂದಿಹನು
ಇಲ್ಲೆ ನೆಲೆಯಾಗಿಹನು ಮಹದೇವ ಶಿವನು
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ಮಡದಿ ಪಾರ್ವತಿದೇವಿ ಒಡೆಯನ ಕಾಣದೇ
ಅಡವಿ ಅಡವಿಯಲ್ಲೆಲ್ಲ ಅಲೆದು ಅರಸಿದಳು
ಪೊಡವಿಯೊಳಗೆ ಬಂದು ಕಂಡಿಹಳು
ಸಡಗರದಿ ನಿಂದಿಹಳು ತಾನೂ ಸನಿಯದಲಿ
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ವರಪುತ್ರ ವಲ್ಲೀಶ, ಸುರಸೈನ್ಯದಧಿಪತಿಯು
ಅಸುರರನು ಮಣಿಸಿ ದಣಿವಾರಿಸವೆನುತ
ಸುರರು ಅಚ್ಚರಿ ಪಂತೆ ಧರೆಗಿಳಿದು ಬಂದಿಹನು
ಪುರದಿ ನಿಂದಿಹ ಸೊಬಗನೇನ ಹೇಳುವೆನು
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ಗಂಗಾಧರನೇ ಬರಲು ಗಂಗೆ ತಾ ಬರದಿಹಳೇ?
ನಾಗಭೂಷಣ ಬರಲು ನಾಗಗಳು ಬಾರದಿಹವೇ?
ಗಂಗೆ ನಾಗಗಳೆರಡೂ ಸಂಗಡವೇ ಹರಿದಿರಲು
ಬಂಗಾರವಾಯ್ತು ನೆಲ ಜಲವು ಬನಸಿರಿಯೂ
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ಅಮರಗಣವಂದಿತನ ನರಬಂಟ ಅಣ್ಣಪ್ಪ
ಸಮರದಲಿ ಖೂಳರನು ತರಿದು ಸಂಹರಿಸಿ
ಉಮೆಯರಸ ಶಿವನ ಸುಕುಮಾರನಿಗೆ ಸಹಚರನು
ನಮಗೊಲಿದು ನಿಂದಿಹನು ಸ್ವಾಮಿ ಸನಿಹದಲಿ
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ಮಾರಹರಸುತನೆ, ಸುಕುಮಾರ ಸುಬ್ರಹ್ಮಣ್ಯ
ತಾರಕಾಂತಕ ದೇವ, ಸುಜ್ಞಾನ ಕಾರಕನೆ
ಕಾರುಣ್ಯ ಮೂರ್ತಿಯೆ, ಕಾರ್ತಿಕೇಯನೆ ಗುಹನೆ
ಆರುಮೊಗ ಹೊಂದಿಹನೆ, ನವಿಲು ವಾಹನನೆ
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ಧರೆಯೊಳಗೆ ಅತಿಶ್ರೇಷ್ಠ ವಿಪ್ರರೆಂದೆನಿಸಿಹರು
ವರವೇದ ಶಾಸ್ತ್ರಾದಿ ವಿದ್ಯಾ ಭೂಷಣರು
ಪುರಜನದಿ ಸೇವಿತರು ರಾಜಸನ್ಮಾನಿತರು
ಭೂಸುತರು ಸ್ಥಾನಿಕರು ನಿನ್ನ ನಿರತ ಪೂಜಿಸರು
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

ಪಾವಂಜೆ ಶ್ರೀ ಕ್ಷೇತ್ರ ಧರೆಯೊಳಗೆ ಪಾವನವು
ರಂಜಿಸುವುದು ಬಳಿಬಂದ, ಭಕುತರನು ಹರಸಿ
ಅಂಜ ಬೇಡಿರಿ ಭವದ ಭಯದ ವ್ಯಥೆ ಕಥೆಗಳಿಗೆ
ಮಂಜದೇವನ ಭಜಿಸಿ, ಮುಕುತಿ ಹೊಂದುವಿರಿ
ಶರಣೆನ್ನಿರೋ ಶಿವನೆ ಶರಣೆನ್ನಿರೋ
ಶರಣೆನ್ನಿರೋ ಶಿವನೆ ಶರಣೆನ್ನಿರೋ

– **ಅಪಯಶ ಬೆಂಗಳೂರು**

## ಬೆತ್ತಲು

ವರ್ಷಋತುವಿನಲಿ
ಹಸಿರೆಂಬ ಪಾಚಿಯು
ಆವರಿಸಿದೆ
ಬಂಡೆಯ ಸುತ್ತಲು!
ವೈಶಾಖದಲಿ
ಹಸಿರನೆಲೆ
ಭೂಮಿಯೂ
ಬೆತ್ತಲು!!

**–ಮಹೇಶ್ ನಿಟಿಲಾಪುರ.**

## ಶುಭ ವಿವಾಹ

ಶ್ರೀಮತಿ ಪುಷ್ಪಾವತಿ ರಾವ್ ಹಾಗೂ ಶ್ರೀ ಲಕ್ಷ್ಮೀನಾರಾಯಣ ರಾವ್ ರವರ ಪುತ್ರ **ಕಿರಣ್** ಹಾಗೂ ಶ್ರೀಮತಿ ರುದ್ರಮ್ಮ ಹಾಗೂ ಶ್ರೀ ಸಿದ್ದೇಶ್ ರವರ ಪುತ್ರಿ **ಅನಿತ** ಇವರ ವಿವಾಹವು **ತಾ.17.05.2019**ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

**** ****

ಕುಮಟಾ ಕಾಗಲದ ಶ್ರೀ ಸುರೇಶ ಶ್ಯಾನುಭಾಗ ಮತ್ತು ಶ್ರೀಮತಿ ಗಿರಿಜಾರವರ ಪುತ್ರ **ನವನೀತ** ಹಾಗೂ ಬಂಟ್ವಾಳ ಪರಾರಿ ಶ್ರೀ ಪ್ರದೀಪ ವಿ.ರಾವ್ ಮತ್ತು ಶ್ರೀಮತಿ ರೇಖಾರವರ ಪುತ್ರಿ **ಐಶ್ವರ್ಯ ಲಕ್ಷ್ಮಿ** ಇವರ ವಿವಾಹವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ **ತಾ.12.06.2019**ರಂದು ನೆರವೇರಿತು.

**** ****

ನಂದಿಕೂರು ದಿ। ಜಯಲಕ್ಷ್ಮೀ ಉಪಾಧ್ಯಾಯ ಮತ್ತು ಶ್ರೀ ದಿ। ಶ್ರೀಪತಿ ಉಪಾಧ್ಯಾಯರವರ ಪುತ್ರ **ಸುಧೀರ್** ಹಾಗೂ ಮಂಗಳೂರು ಶ್ರೀಮತಿ ಹರಿಣ ಕುಮಾರಿ ಮತ್ತು ಶ್ರೀಧರ ರಾಯರ ಪುತ್ರಿ **ಶುಭ್ರತಾ** ಇವರ ವಿವಾಹವು **ತಾ.14.06.2019**ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿತು.

**** ****

ಪೆರ್ಡೂರು ಶ್ರೀ ಗಣೇಶ್ ಭಂಡಿ ಹಾಗೂ ಶ್ರೀಮತಿ ಆಶಾ ಭಂಡಿಯವರ ಪುತ್ರಿ **ಅನೂಷಾ** ಹಾಗೂ ಕುರಾಯ ಶ್ರೀ ಬಾಲಕೃಷ್ಣ ರಾವ್ ಮತ್ತು ಪಾರ್ವತಿ ಇವರ ಪುತ್ರ **ಭರತ್** ಇವರ ವಿವಾಹವು **ತಾ.20.06.2019** ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು

**** ****

ಶ್ರೀಮತಿ ನಿರ್ಮಲಾ ಹಾಗೂ ಶ್ರೀ ಪ್ರಸನ್ನ ಕುಮಾರ್ ಬೆಳ್ಳೆ ಇವರ ಪುತ್ರಿ **ಪ್ರೇರಣಾ** ಹಾಗೂ ಅಲಂಕಾರು ಶ್ರೀಮತಿ ಸುಶೀಲ ಮತ್ತು ವಸಂತಕುಮಾರ್ ಇವರ ಪುತ್ರ **ಸಂತೋಷಕುಮಾರ** ಇವರ ವಿವಾಹವು **ತಾ.21.06.2019**ರಂದು ಉಡುಪಿ ಆರೂರು ಲಕ್ಷ್ಮೀನಾರಾಯಣ ರಾವ್ ಸಭಾಭವನದಲ್ಲಿ ನೆರವೇರಿತು.

**** ****

ಕೇಳ ನಾರಾಯಣ ರಾವ್ ಮತ್ತು ಶ್ರೀಮತಿ ಸುಲೇಖಾರವರ ಪುತ್ರಿ **ಕವನ** ಹಾಗೂ ಬೈಕಾಡಿ ಶ್ರೀ ರತ್ನಾಕರ ರಾವ್ ಮತ್ತು ಶ್ರೀಮತಿ ಪುಷ್ಪಾರವರ ಪುತ್ರ **ರಾಘವೇಂದ್ರ** ಇವರ ವಿವಾಹವು ಹೆಬ್ರಿ ಅನಂತಪದ್ಮನಾಭನ ಸನ್ನಿಧಿಯಲ್ಲಿ **ತಾ.21.06.2019**ರಂದು ನೆರವೇರಿತು.

**** ****

ಎಲ್ಲೂರು ಶ್ರೀ ಭವಾನಿಶಂಕರರಾವ್ ಮತ್ತು ಶ್ರೀಮತಿ ಭಾರತಿ ಇವರ ಪುತ್ರ **ಕಿಶೋರ್ ಕುಮಾರ್** ಹಾಗೂ ಶಿರಸಿ ಶ್ರೀಮತಿ ಮತ್ತು ಶ್ರೀ ಸಂಗಮೇಶ್ವರ್ ಇವರ ಪುತ್ರಿ **ಪ್ರತಿಭಾ** ಇವರ ವಿವಾಹವು **ತಾ.26.06.2019** ರಂದು ಉಡುಪಿಯ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

**** ****

## ಗೃಹಪ್ರವೇಶ

ಪಡುಬಿದ್ರೆಯ ಡಾ। ಗುರುಪ್ರಸಾದ ಹಾಗೂ ಡಾ ಭಾಗ್ಯಶ್ರೀ ದಂಪತಿಗಳು ಪಡುಬಿದ್ರೆಯ ಅಬ್ಬೆದಿಯ ಸುಜ್ಲಾನ್ ಕಾಲನಿಯ ಬಳಿ ನೂತನವಾಗಿ ನಿರ್ಮಿಸಿದ ನಿವಾಸದ ಗೃಹಪ್ರವೇಶವನ್ನು ತಾ.27.06.2019ರಂದು ನೆರವೇರಿಸಿದರು.

**** ****

ಬೆಂಗಳೂರಿನ ದಿನ್ನೂರಿನ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಶ್ರೀಮತಿ ಶೋಭಾ ಶಾಸ್ತ್ರಿ ದಂಪತಿಗಳ ಪುತ್ರ ಶ್ರೀ ಹರೀಶ ಶಾಸ್ತ್ರಿಯವರು ಸರ್ಜಾಪುರ ರಸ್ತೆ ಮುಳ್ಳೂರಿನಲ್ಲಿ ಕಟ್ಟಿಸಿದ ತನ್ನ ನೂತನ ಗೃಹದ ಪ್ರವೇಶವನ್ನು ತಾ.23.06.2019ರಂದು ನೆರವೇರಿಸಿದರು.

## ಬ್ರಹ್ಮೋಪದೇಶ

**ಚಿ। ವೃಶಾಂಕ**

ಚೊಕ್ಕಾಡಿ ಶ್ರೀಮತಿ ಉಷಾ ಮತ್ತು ಶ್ರೀ ಲಕ್ಷ್ಮೀಕಾಂತ ಚೊಕ್ಕಾಡಿ ಇವರ ಪುತ್ರ ವೃಶಾಂಕನ ಬ್ರಹ್ಮೋಪದೇಶ ಸಮಾರಂಭವು 27–06–2019ರಂದು ಎರ್ಮಾಳು ಶ್ರೀ ಜನಾರ್ಧನ ದೇವಸ್ಥಾನದ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

**** ****

**ಚಿ। ಆದಿತ್ಯ**

ಕಾಪು ಶ್ರೀಮತಿ ವಿಜಯಲಕ್ಷ್ಮಿ ಹಾಗೂ ಶ್ರೀ ದತ್ತಾತ್ರೇಯ ದಂಪತಿಗಳ ಪುತ್ರ ಆದಿತ್ಯನ ಬ್ರಹ್ಮೋಪದೇಶ ಸಮಾರಂಭವು ತಾ 23–05–2019ರಂದು ಕಾಪು ಶ್ರೀ ವೀರಭದ್ರ ಸಭಾಭವನದಲ್ಲಿ ನೆರವೇರಿತು.

## ಏಕಾದಶರುದ್ರ

ಶ್ರೀಮತಿ ಮತ್ತು ಶ್ರೀ ಬಿ.ವಾಸುದೇವ ರಾವ್ ದಂಪತಿಗಳು ಕುಟುಂಬದವರೊಡಗೂಡಿ ಉಡುಪಿ ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.23–06–2019ರಂದು ಏಕಾದಶ ರುದ್ರಾಭಿಷೇಕ ನೆರವೇರಿಸಿದರು.

**** ****

ಶ್ರೀಮತಿ ಮತ್ತು ಶ್ರೀ ಅರವಿಂದ ಕುಮಾರ್ ದಂಪತಿಗಳು ಕುಟುಂಬದವರೊಡಗೂಡಿ ಉಡುಪಿ ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.05–06–2019ರಂದು ಏಕಾದಶ ರುದ್ರಾಭಿಷೇಕ ನೆರವೇರಿಸಿದರು.

ಅಲೆವೂರು ಶ್ರೀ ಬಾಲಕೃಷ್ಣ ಭಟ್ ಹಾಗೂ ಶ್ರೀಮತಿ ಜಯಶ್ರೀ ಇವರ ಪುತ್ರ **ರಾಜಶೇಖರ** ಹಾಗೂ ಎಲ್ಲೂರು ಶ್ರೀಮತಿ ಪುಷ್ಪಾ ಹಾಗೂ ದಿ. ಸೀತಾರಾಮ್ ರವರ ಪುತ್ರಿ **ಶ್ರುತಿ** ಇವರ ವಿವಾಹವು **ತಾ.30.06.2019**ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

**** ****

ಎಲ್ಲೂರು ಶ್ರೀ ವಾಸುದೇವ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ಇವರ ಪುತ್ರಿ **ವಿಜೇತ** ಹಾಗೂ ಬೀಜಾಡಿ ಶ್ರೀಮತಿ ಜಯಲಕ್ಷ್ಮಿ ಹಾಗೂ ದಿ ಸತ್ಯನಾರಾಯಣ ಇವರ ಪುತ್ರ **ಆನಂದ** ಇವರ ವಿವಾಹವು ಉಡುಪಿ ಮಥುರಾ ಕಂಫರ್ಟ್ಸ್ ನ ಜಯಕೃಷ್ಣ ಸಭಾಭವನದಲ್ಲಿ **ತಾ.30.06.2019** ರಂದು ನೆರವೇರಿತು.


## ನಿಧನ



**ಶ್ರೀ ಕೋಲ್ಪೆ ಶಂಕರ ನಾರಾಯಣ ರಾಯರು**

ಮೈಸೂರಿನ ಶ್ರೀ ಕೋಲ್ಪೆ ಶಂಕರ ನಾರಾಯಣ ರಾಯರು ತಾ.29.06.2019 ರಂದು ತನ್ನ 87ನೆಯ ವಯಸ್ಸಿನಲ್ಲಿ ನಿಧನ ಹೊಂದಿದರು.

**** ****



**ಜ್ಞಾನೇಶ್ವರ ರಾಯರು**

ಮಂಗಳೂರಿನ ಶ್ರೀ ಎರ್ಮಾಳು ಜ್ಞಾನೇಶ್ವರ ರಾಯರು ತಾ.06.06.2019 ರಂದು ನಿಧನಹೊಂದಿದರು

**** ****



**ಬಿ ಪ್ರಭಾಕರ ರಾಯರು**

ಬೆಂಗಳೂರಿನ ಶ್ರೀ ಬಿ ಪ್ರಭಾಕರ ರಾಯರು ತಾ.26.06.2019ರಂದು ನಿಧನ ಹೊಂದಿದರು. ಇವರು ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ. ಕೃಷ್ಣಮೂರ್ತಿ ರಾಯರ ಅನುಜ.

**** ****



**ಎಚ್.ಆರ್.ವಸಂತಿ**

ಗದಗ ಹೊಸಪಟ್ಟಣ ದಿ. ಎಚ್ ರಾಮಕೃಷ್ಣರಾಯರ ಪತ್ನಿ ಶ್ರೀಮತಿ ಎಚ್.ಆರ್.ವಸಂತಿಯವರು ತಾ.06.05.2019 ರಂದು ನಿಧನ ಹೊಂದಿದರು. ಇವರು ನಮ್ಮ ಸಂಘದ ಆಡಳಿತ ಮಂಡಳಿಯ ಸದಸ್ಯರಾದ ಕಾಪು ಮಜೂರಿನ ಶ್ರಿ ಮಲ್ಲಿಕಾರ್ಜುನ ರಾಯರ ತಾಯಿ.

## ಸೀಮಂತೋನ್ನಯನ

ಶ್ರೀಮತಿ ಆಶಾ ಮತ್ತು ಶ್ರೀ ಅರವಿಂದ ಕುಮಾರ್ ದಂಪತಿಗಳು ತಮ್ಮ ಪುತ್ರ ಅನುದೀಪ್‌ನ ಪತ್ನಿ ಪಲ್ಲವಿಯ ಸೀಮಂತೋನ್ನಯನ ಸಮಾರಂಭವನ್ನು ತಾ.06.06.2019ರಂದು ಶಾರದಾ ಮಂಟಪದ ಜ್ಞಾನ ಮಂದಿರದಲ್ಲಿ ನೆರವೇರಿಸಿದರು.

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
the right Place for the right customers
QUALITY FIRST AND ALWAYS


Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಅಭಿನಂದನೆಗಳು



### ವಿನೀತ್ ಆರ್.ರಾವ್

ಎಲ್ಲೂರಿನ ಶ್ರೀ ರಾಕೇಶ್ ರಾವ್ ಹಾಗೂ ಶ್ರೀಮತಿ ಶ್ವೇತಾ ದಂಪತಿಗಳ ಪುತ್ರ ವಿನೀತ್ ಆರ್.ರಾವ್ ದ್ವಿತೀಯ ಪದವಿಪೂರ್ವ ವಿಜ್ಞಾನ ವಿಭಾಗದಲ್ಲಿ 584 ಅಂಕ ಗಳಿಸುವ ಮೂಲಕ ಕರ್ನಾಟಕ ರಾಜ್ಯಕ್ಕೆ 11ನೇ ರ್‍ಯಾಂಕ್ ಗಳಿಸಿರುತ್ತಾನೆ.



### ಕೀರ್ತನಾ ಎಸ್ ಹೆಬ್ಬಾರ್

ಕಾರ್ಕಳ ಶ್ರೀ ಶ್ರೀನಿವಾಸ ಹೆಬ್ಬಾರ್ ಹಾಗೂ ಮಲ್ಲಿಕಾ ಹೆಬ್ಬಾರ್‌ರ ಪುತ್ರಿ ಕೀರ್ತನಾ ಎಸ್ ಹೆಬ್ಬಾರ್ ಈ ಸಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 594 ಅಂಕ ಗಳಿಸಿ ಸಾಧನೆ ಗೈದಿರುತ್ತಾಳೆ. ಇವಳು ಕಾರ್ಕಳ ಕ್ರೈಸ್ಟ್ ಕಿಂಗ್ ಹೈಸ್ಕೂಲಿನ ವಿದ್ಯಾರ್ಥಿನಿ



### ವೈ.ಶಿವಾನಿ

ಎರ್ಮಾಳು ಶ್ರೀ.ವೈ.ಎನ್. ರಾಜೇಶ್ ರಾವ್ ಮತ್ತು ಶ್ರೀಮತಿ ಆಶಾಲತಾ ಇವರ ಪುತ್ರಿ ವೈ.ಶಿವಾನಿ ಇವಳು ಪ್ರಸ್ತುತ 2019 ರ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 91% (566) ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಅಲ್ಲದೇ ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಜೂನಿಯರ್ ವಿಭಾಗ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯೊಂದಿಗೆ ಉತ್ತೀರ್ಣರಾಗಿರುತ್ತಾಳೆ. ಇವಳು ಎರ್ಮಾಳು ವೈ.ಎನ್. ಪ್ರಭಾಕರ ರಾವ್ ಮತ್ತು ಶ್ರೀಮತಿ ಲಲಿತ ಬಿ.ಎಸ್ (ನಿವೃತ್ತ ಮುಖ್ಯೋಪಾಧ್ಯಾಯರು) ಇವರ ಪೌತ್ರಿಯಾಗಿರುತ್ತಾಳೆ.



### ರಚನಾ

ಸಾಲಿಗ್ರಾಮ ರಥಬೀದಿಯ ಶ್ರೀ ರಘುರಾಮ ಹೆಬ್ಬಾರ್ ಮತ್ತು ಶ್ರೀಮತಿ ರೇವತಿ ಹೆಬ್ಬಾರ್ ಇವರ ಪುತ್ರಿ ರಚನಾ 551 ಅಂಕ ಗಳಿಸಿ ಉತ್ತೀರ್ಣಳಾಗಿರುತ್ತಾಳೆ. ಇವಳು ಕೋಟ ವಿವೇಕ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ



### ರಕ್ಷಿತ್ ರಾವ್

ಕಾರ್ಕಳದ ಶ್ರೀ ಪಿ. ಹರೀಶ್ಚಂದ್ರ ರಾವ್ ಮತ್ತು ಶ್ರೀಮತಿ ವಂದನಾ ರಾವ್ ಇವರ ಪುತ್ರ ರಕ್ಷಿತ್ ರಾವ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 91.5 ಶೇಕಡಾ ಅಂಕಗಳಿಸಿ ಉತ್ತೀರ್ಣನಾಗಿರುತ್ತಾನೆ. ಇವನು ಕಾರ್ಕಳ ಭುವನೇಂದ್ರ ಹೈಸ್ಕೂಲಿನ ವಿದ್ಯಾರ್ಥಿ.



### ಡಾ। ಹೇಮಂತ್

ಮಂಗಳೂರಿನ ಡಾ ಎಸ್ ದಿವಾಕರ್ ರಾವ್ ಹಾಗೂ ಶ್ರೀಮತಿ ಸ್ನೇಹಲತಾ ರಾವ್ ರವರ ಮೊಮ್ಮಗ ಹಾಗೂ ಶ್ರೀ ಅಮರ್ ದೀಪ್ ಹಾಗೂ ತನುಜಾತವರ ಪುತ್ರ ಹೇಮಂತ್ ಡಿಲ್ಲಿಯ ಪ್ರತಿಷ್ಟಿತ ವೈದ್ಯಕೀಯ ವಿಜ್ಞಾನ ಸಂಸ್ಥೆಯಾದ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಾಯನ್ಸ್ ನಲ್ಲಿ ನ್ಯೂರೋಸರ್ಜರಿ ವಿಬಾಗದಲ್ಲಿ ಉನ್ನತ ಅಭ್ಯಾಸಕ್ಕಾಗಿ(ಎಂ ಸಿ ಹೆಚ್ ಪದವಿ) ಪ್ರವೇಶ ಪಡೆದಿರುತ್ತಾನೆ



### ಕುಮಾರಿ ಸಮನ್ವಿತ ಜಿ.ಭಟ್

ಮಂಗಳೂರಿನ ಸ್ಟೆಂಟ್ ತೆರೆಸಾಸ್ ಸ್ಕೂಲ್‌ನ ವಿದ್ಯಾರ್ಥಿನಿಯಾಗಿರುವ ಕುಮಾರಿ ಸಮನ್ವಿತ ಜಿ.ಭಟ್ 2018-19ರ ಸಾಲಿನ ಐ.ಸಿ.ಎಸ್.ಇ. ಹತ್ತನೇ ತರಗತಿ ಪರೀಕ್ಷೆಯಲ್ಲಿ 87% ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮಂಗಳೂರಿನಲ್ಲಿರುವ ಹಳೆಯಂಗಡಿ ಗಣೇಶ್ ಭಟ್ ಮತ್ತು ಶ್ರೀಲತಾ ಜಿ.ಭಟ್ ಇವರ ಪುತ್ರಿ.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು





## ಅದಮಾರು ಶ್ರೀಗಳ ಭೇಟಿ



ಅಂಬಲ್ಪಾಡಿ ಗಣೇಶ ಹೆಬ್ಬಾರರ ಮನೆಯಾದ "ಕುಟೀರ" ದಲ್ಲಿ ಭಾವಿ ಪರ್ಯಾಯ ಪೀಠಾಧಿಪತಿಯಾದ, ಶ್ರೀ ಅದಮಾರು ಮಠದ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು, ತಾ.08.06.2019 ರಂದು ತಮ್ಮ ಪಟ್ಟ ದೇವರಾದ ಕಾಳೀಯಮರ್ಧನ ಕೃಷ್ಣದೇವರಿಗೆ ಪೂಜೆಯನ್ನು ಸಲ್ಲಿಸಿ, ಭಿಕ್ಷಾವಂದನೆಯನ್ನು ಸ್ವೀಕರಿಸಿ, ನೆರೆದಿದ್ದವರಿಗೆ ಫಲ ಮಂತ್ರಾಕ್ಷತೆಯನ್ನು ನೀಡಿ ಹರಿಸಿದರು. ಹೆಬ್ಬಾರ್ ದಂಪತಿಗಳು ಪಾದ ಪೂಜೆಯನ್ನು ನೆರವೇರಿಸಿದರು.

## ಪಾದೆಬೆಟ್ಟು ದೇವಸ್ಥಾನಕ್ಕೆ ಕಾಣಿಕೆ

ಕಕ್ಕುಂಜೆ ಯ ಶ್ರೀ ಮಾಂಟ್ರಾಡಿ ಮೋಹನರಾಯರು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಅಭಿವೃದ್ಧಿಗೆ ಗಮನಾರ್ಹ ಮೊತ್ತದ ಕಾಣಿಕೆಯ ಚೆಕ್ಕನ್ನು ದೇವಳದ ಮೊಕ್ತೇಸರ ಶ್ರೀ ಬಿ ಜಯರಾಮರಾಯರಿಗೆ ಹಸ್ತಾಂತರಿಸಿದರು. ಶ್ರೀ ಬಿ.ಜಯರಾಮರಾವ್ ಹಾಗೂ ದೇವಳದ ಪದಾಧಿಕಾರಿಗಳು ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದ್ದಾರೆ.



## ಪ್ರಧಾನ ಮಂತ್ರಿಗಳಿಗೆ ಸಲಹೆಗಾರರಾಗಿ ನೇಮಕ

ಬೆಳ್ಳೆ ಕುಟುಂಬದ ಡಾ ವಿಶಾಲ್ ಯು.ಎಸ್. ರಾವ್ ರವರು ಪ್ರಧಾನಮಂತ್ರಿಗಳ ವಿಜ್ಞಾನ ಹಾಗೂ ಸಂಶೋಧನಾ ಸಲಹಾ ಸಮಿತಿಯ ಸದಸ್ಯರಾಗಿ ನೇಮಕವಾಗಿರುತ್ತಾರೆ.

## ಭಗವತೀ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಚಾಲನೆ



ಬೈಂದೂರು ಬಳಿಯ ಕೆರ್ಗಾಲ್‌ನಲ್ಲಿರುವ ಶ್ರೀ ಭಗವತೀ ದುರ್ಗಾಪರಮೇಶ್ವರೀ ಹಾಗೂ ವೀರಭದ್ರ ದೇವಸ್ಥಾನದ ಸಂಪೂರ್ಣ ಜೀರ್ಣೋದ್ಧಾರಕ್ಕಾಗಿ ಬಾಲಾಲಯ ಪ್ರತಿಷ್ಠೆ ಹಾಗೂ ಷಡಾಧಾರ ನಿಧಿಕುಂಭ ಸ್ಥಾಪನೆ ಇತ್ಯಾದಿ ಧಾರ್ಮಿಕ ವಿಧಾನಗಳು ಇತ್ತೀಚೆಗೆ ದೇವಸ್ಥಾನದ ಮೊಕ್ತೇಸರ ಶ್ರೀ ಸುಬ್ರಾಯ ಶ್ಯಾನುಭಾಗ ಇವರ ನೇತೃತ್ವದಲ್ಲಿ ನಡೆಯಿತು. ಸಮಾಜಬಾಂಧವರಿಂದ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸಲಾಗಿದೆ.


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ವೈವಾಹಿಕ ಜೀವನದ ಬೆಳ್ಳಿ ಹಬ್ಬದ ಶುಭಾಶಯಗಳು



ದಾಂಪತ್ಯ ಜೀವನದ 25 ಸಂವತ್ಸರಗಳನ್ನು ಪೂರೈಸಿ ಇಂದು ಬೆಳ್ಳಿ ಹಬ್ಬವನ್ನು ಆಚರಿಸುತ್ತಿರುವ ನಿಮಗೆ ಶ್ರೀ ದೇವರು ಆಯುರಾರೋಗ್ಯ, ಸುಖ, ಶಾಂತಿ ಕರುಣಿಸಲಿ ಎಂದು ಹಾರೈಸುವ,

ಶುಭಾಶಯಗಳೊಂದಿಗೆ,

ಶ್ರೀಮತಿ ಮತ್ತು ಶ್ರೀ ನಾಗರಾಜ ಭಂಡಿ ಮತ್ತು ಸಹೋದರರು
ಶ್ರೀಮತಿ ಮತ್ತು ಶ್ರೀ ದಯಾನಂದ ರಾವ್. ಮಂಗಳೂರು
ಶ್ರೀಮತಿ ಪುಷ್ಪಾಲತ ರಾವ್ ಸಾಂಗ್ಲಿ
ಕು. ಪ್ರಗತಿ ಭಂಡಿ ಮತ್ತು ಪ್ರಣಾಮ್ಯ ಭಂಡಿ ಪೆರ್ಡೂರು.

## ಶುಭಾಶಯಗಳು



ಶ್ರೀಮತಿ ವೃಂದಾ ಮತ್ತು ಶ್ರೀ ದೀಪಕ್ ರಾವ್
ವಿವಾಹ ದಿನಾಂಕ: 29-05-2019

ವೈವಾಹಿಕ ಜೀವನಕ್ಕೆ ಪಾದಾರ್ಪಣೆಗೈದ ಈ ಶುಭ ಸಂದರ್ಭದಲ್ಲಿ ನಿಮ್ಮ ಮುಂದಿನ ದಿನಗಳು ಸುಖ ಸಮೃದ್ಧಿಯಿಂದ ತುಂಬಿ ತುಳುಕಲಿ ಎಂದು ಹಾರೈಸುತ್ತೇವೆ.

ಶ್ರೀಮತಿ ಮಾಲತಿ ಮತ್ತು
ಶ್ರೀ ಕೇಶವ ರಾವ್
ಆಳುಗ್ಗೇಲು, ಹಿರಿಯಡಕ.

ಶ್ರೀಮತಿ ಗೀತಾ ಮತ್ತು
ಶ್ರೀ ಕೃಷ್ಣಕುಮಾರ್ ರಾವ್
ಮಟ್ಟು, ಕಟಪಾಡಿ

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+

**With Best Compliments From :**

***Rajathadri Hotel Pvt. Ltd.**
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

## ಬೆಳ್ತಂಗಡಿ ಸಂಘದ ವಾರ್ಷಿಕೋತ್ಸವ



ಬೆಳ್ತಂಗಡಿ ಸಂಘದ ವಾರ್ಷಿಕೋತ್ಸವವು ತಾ.30-06-2019ರಂದು ಬೆಳ್ತಂಗಡಿಯ ಲಾಯಿಲದಲ್ಲಿರುವ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು. ಆ ಪ್ರಯುಕ್ತ ಬೆಳಗ್ಗೆ ವಿವಿಧ ಆಟೋಟ ಸ್ಪರ್ಧೆಗಳು ಜರಗಿದವು. ಮಧ್ಯಾಹ್ನ ಭೋಜನಾನಂತರ ಸಭಾ ಕಾರ್ಯಕ್ರಮವು ಜರಗಿತು. ಈ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ದಿನೇಶ್ ಕುಮಾರ್ ಎಮ್.ಎಸ್.ರವರು ಸಭೆಯ ಅಧ್ಯಕ್ಷರಾಗಿದ್ದರು. ಮುಖ್ಯ ಅತಿಥಿಗಳಾಗಿ ಪುತ್ತೂರಿನ ಅಂಬಿಕಾ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯ ನಟ್ಟೋಜ ಹಾಗೂ ಉಜಿರೆ ವಲಯದ ತುಳು ಶಿವಳ್ಳಿ ಸಭಾ ಇದರ ಅಧ್ಯಕ್ಷರಾದ ಶ್ರೀ ಶರತ್ ಕೃಷ್ಣ ಪಡ್ವೆಟ್ನಾಯ ಆಗಮಿಸಿದ್ದರು. ಶ್ರೀ ಬಿ.ಕೆ ಧನಂಜಯ ಕುಮಾರ್, ಶ್ರೀ ವಸಂತ್ ಭಟ್ ನಾರಾವಿ, ಶ್ರೀ ವಿಶ್ವಜಿತ್ ರಾವ್ ಧರ್ಮಸ್ಥಳ, ಶ್ರೀ ಪಿ.ಲಕ್ಷ್ಮೀನಾರಾಯಣ ರಾವ್ ಧರ್ಮಸ್ಥಳ, ಶ್ರೀಮತಿ ಶಾಂತಾ ಸುರೇಶ್, ಶ್ರೀಮತಿ ಸುಮಂಗಳಾ ಪ್ರಶಾಂತ ರಾವ್, ಶ್ರೀಮತಿ ರೂಪಾ ಮಧುಸೂದನ ರಾವ್, ಶ್ರೀ ಜಯಚಂದ್ರ ರಾವ್, ಶ್ರೀ ಮಿಥುನ್ ರಾವ್ ವೇದಿಕೆಯಲ್ಲಿದ್ದರು. ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ ಹಾಗೂ ವಿದ್ಯಾರ್ಥಿ ವೇತನ ವಿತರಣೆ ನಡೆಯಿತು. ಸಭಾ ಕಾರ್ಯಕ್ರಮದ ನಂತರ ಸಂಘದ ಸದಸ್ಯರಿಂದ ನಡೆದ ಹರಟೆ ಕಾರ್ಯಕ್ರಮ ಆಕರ್ಷಕವಾಗಿತ್ತು.

### ಪ್ರಕಟಣೆ

ಶ್ರೀ ಶಾರದಾ ಮಂಟಪದಲ್ಲಿ ತಾ.11-07-2019ರಿಂದ ಸಂಜೆ 6.00ರಿಂದ 7.00 ಗಂಟೆಯವರೆಗೆ ಆಸಕ್ತ ಸಮಾಜಬಾಂಧವರಿಗೆ ವೈದಿಕ ಪಾಠ ನಡೆಯಲಿದೆ. ಸಂಧ್ಯಾವಂದನೆ ಹಾಗೂ ನಿತ್ಯಪೂಜಾ ವಿಧಿಗಳನ್ನು ಕಲಿಸಲಾಗುವುದು. ಈ ಕಾರ್ಯಕ್ರಮವು ಒಂದು ತಿಂಗಳ ಕಾಲ ನಡೆಯಲಿದೆ. ಸಮಾಜ ಬಾಂಧವರ ಪ್ರೋತ್ಸಾಹವನ್ನು ಅಪೇಕ್ಷಿಸುತ್ತೇವೆ.

**ಸಂಪರ್ಕಿಸಿ: ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್ 9343560647**



ಪುತ್ತೂರಿನ ಶಿವಸದನಕ್ಕೆ ಭೇಟಿಯಿತ್ತಾಗ ತೆಗೆದ ಭಾವಚಿತ್ರಗಳ ಸಂಚಿಕೆಯನ್ನು ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥರವರ ಸನ್ನಿಧಾನಕ್ಕೆ ಸಮರ್ಪಿಸಿದಾಗ.



ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಉಪನ್ಯಾಸಕರಾದ ಶ್ರೀಮತಿ ರಮ್ಯಾ (ಖ್ಯಾತ ಚರ್ಮರೋಗ ತಜ್ಞ ಡಾ। ಲೋಕೇಶ್‌ರವರ ಪತ್ನಿ)ರವರಿಗೆ ಪಿಹೆಚ್‌ಡಿ ಪದವಿ ಪ್ರದಾನಿಸಿದ ಸಂದರ್ಭ.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣೆಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣೆಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging




**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66, ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೆಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ





Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org